ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ.

ಲೇಖನ–ಸುದ್ದಿ ಕಳುಹಿಸುವ ಮೂಲಕ ನೋವುಳ್ಳವರ ನುಡಿಯಾಗಿರುವ ಪಂಚಮವನ್ನು ನಿಮ್ಮ ದನಿಯನ್ನಾಗಿಸಿಕೊಳ್ಳಿ.

ಸಂಪುಟ : 4 ಸಂಚಿಕೆ : 15–16 5, ಅಕ್ಟೋಬರ್ 1980 ಪಾಕ್ಷಿಕ ಬೆಲೆ : 20 ಪೈಸೆ ವಾರ್ಷಿಕ ಚಂದಾ 5 ರೂ.ಗಳು

ಮಧುಗಿರಿ ಸಮೀಪ ದಲಿತನೊಬ್ಬನ ಕಗ್ಗೊಲೆ

[ಪಂಚಮ ಪ್ರತಿನಿಧಿಯಿಂದ]

ಊಳಿಗಮಾನ್ಯ ಕರಾಳ ವ್ಯವಸ್ಥೆಯು ದಲಿತರನ್ನು ಕ್ಷಣ ಕಣವೂ ಕೊಲ್ಲುತ್ತಿದೆ. ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಇಟಕದಿಬ್ಬನ ಹಳ್ಳಿಯಲ್ಲಿ ದೊಡ್ಡಮಲ್ಲಪ್ಪ ಎಂಬ ದಲಿತನೊಬ್ಬನನ್ನು ಅಮಾನುಷವಾಗಿ ಹೊಡೆದು ಕಳೆದ ಆಗಸ್ಟ್ 13ರಂದು ಕೊಲೆ ಮಾಡಿರುವ ಘಟನೆ ಈಗ ಬೆಳಕಿಗೆ ಬಂದಿದೆ.

ಭೂಮಾಲೀಕ ರೆಡ್ಡಿಗಳ ಪ್ರಾಬಲ್ಯವಿರುವ ಇಲ್ಲಿ ದಲಿತರನ್ನು ಹೆದರಿಸಿ ಬೆದರಿಸಿ ಬಿಟ್ಟಿ-ಕಡಿಮೆ ಕೂಲಿ ಕೆಲಸಮಾಡಿಸಲು ಬಳಸುವ ಅಸ್ತ್ರ ಕೊಲೆ ಬೆದರಿಕೆ. ಇದುವರಗೆ ಈ ದಿಬ್ಬದಲ್ಲಿ ಹತ್ತಾರು ಕೊಲೆಗಳು ನಡೆದಿದ್ದರೂ, ಅಗಳ್ತಿಯಲ್ಲಿ ಬಿದ್ದ ಮಣ್ಣಿನಂತೆ ರೆ ಡ್ಡಿ ಗ ಳ ಪ್ರಭಾವದಿಂದ ಮುಚ್ಚಿಹೋಗಿವೆ.

ಸುಮಾರು 45 ವರ್ಷದ ದಲಿತ ದೊಡ್ಡಮಲ್ಲಪ್ಪನಿಗೆ 4 ಜನ ತಮ್ಮಂದಿರು, ಹೆಂಡತಿ ಮತ್ತು ಇಬ್ಬರು ಮಕ್ಕಳುಇದ್ದರೆ ಎಂಟು ತಿಂಗಳ ಬಾಣಂತಿಯಾಗಿದ್ದ ಹೆಂಡತಿ ನರಸಮ್ಮ ಬಾಣಂತನಕ್ಕೆಂದು ತವರೂರು ಎಡೆಯೂರಿಗೆ ಹೋಗಿದ್ದವಳು ಇನ್ನು ಬಂದಿರಲಿಲ್ಲ ಪುಟ್ಟಹೊಸ ಮನೆಯೊಂದನ್ನು ಕಟ್ಟುತ್ತಿದ್ದ ದೊಡ್ಡಮಲ್ಲಪ್ಪ, ಅದನ್ನು ಪೂರ್ತಿಗೊಳಿಸಿ ಸದ್ಯದಲ್ಲೇ ಹೆಂಡತಿಯನ್ನು ಕರೆತರುವ ಆಸೆಯಲ್ಲಿದ್ದ.

ಆಗಸ್ಟ್ 13 ಬೆಳಗ್ಗೆ ಎದ್ದು ಮೇಕೆಗೆ ಸೊಪ್ಪು ತರಲು ಊರ ಪಕ್ಕದ ಕೊಂಡಾರೆಡ್ಡಿಯ ಹೊಲದ ಬಳಿ ಸೊಪ್ಪು ಮುರಿಯುತ್ತಿದ್ದ. ಇದನ್ನು ಕಂಡ ಕೊಂಡಾರೆಡ್ಡಿ ಮತ್ತಿತರರು ಓಡಿ ಬಂದು ಹಿಂದು ಮುಂದು ನೋಡದೆ ದೊಣ್ಣೆ, ಕಲ್ಲು, ಇಟ್ಟಿಗೆಗಳಿಂದ ಹೊಡೆದರು. ಬಲ ಕಪಾಲಕ್ಕೆ ಬಿದ್ದ ಬಲವಾದ ಏಟಿನಿಂದ ದೊಡ್ಡಮಲ್ಲಪ್ಪ ನೆಲಕ್ಕೆ ಕುಸಿದುಬಿದ್ದ ಪಕ್ಕದ ಜಮೀನಿನಲ್ಲಿ ನೀರು ಕಟ್ಟುತ್ತಿದ್ದ ಬಸವಲಿಂಗಪ್ಪ ಮತ್ತು ನಾರಾಯಣ ಓಡಿ ಬಂದರು. ಕೊಲೆಗಡುಕ ಐವರು ಕಂಬಿಕಿತ್ತರು. ಅಷ್ಟರಲ್ಲಿ ಕೊಲೆಯ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು.

ಅಣ್ಣ ದೊಡ್ಡಮಲ್ಲಪ್ಪನ ಕೊಲೆ ಬಗ್ಗೆ ಪೊಲೀಸ್‌ಗೆ ದೂರು ಕೊಡಲು ತಮ್ಮ ಚಿಕ್ಕಮಲ್ಲಪ್ಪ ಅರ್ಜಿ ಬರಸಲು ಊರೆಲ್ಲ ಅಲ್ಲದ, ಎಲ್ಲರೂ ಇಲ್ಲ ಎಂದರು. ಕೊನೆಗೂ ನಾಲ್ಕಾರು ಬಾರಿ ದುಂಬಾಲು ಬಿದ್ದು ಸುಬ್ಬಾರೆಡ್ಡಿ ಎಂಬಾತನಿಂದ ನಾಲ್ಕು ಸಾಲು ಗೀಚಿಸಿ 10 ಮೈಲಿ ದೂರದ ಮಿಡಿಗೇಶಿ ಪೊಲೀಸ್‌ಗೆ ದೂರು ಮುಟ್ಟಿಸಿದ ಮ.ಧ್ಯಾಹ್ನ ಪೊಲೀಸರು ಬಂದರು. ಮಹಾಜರು ನಡೆಸಿ ಆತುರಾತುರವಾಗಿ ಒತ್ತಾಯದಿಂದ ಪೋಲೀಸರು ಶವಸಂಸ್ಕಾರ ಮಾಡಿಸಿದರು.

ಹೆಂಡತಿಗೆ ಮುಖ ಸಿಗಲಿಲ್ಲ

ಸುದ್ದಿ ತಿಳಿದು ಮಾರುದಿನ ತೌರೂರಿನಿಂದ ಬಂದ ನರಸಮ್ಮಳಿಗೆ ಗಂಡನ ಮುಖವೂ ಕೂಡ ಸಿಗಲಿಲ್ಲ. ಅತ್ತುಕರೆದು ಗೋಳಾಡಿ ಒದ್ದಾಡಿದಳು. ಆಕೆಯ ಅರಣ್ಯರೋದನ ಕಂಡವರ ಕಣ್ಣಲ್ಲಿ ನೀರು ತರು

(2ನೇ ಪುಟ ನೋಡಿ)

ಜೀತದಾಳುಗಳ ಮಾರಾಟ

ಜೀತದಾಳುಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವ ಹಾಗೂ ಹಣ ಸಾಲ ಕೊಡುವ ಲೇವಾದೇವಿಗಾರರ ಕಪಿಮುಷ್ಟಿಗೆ ಅವರನ್ನು ಸಿಕ್ಕಿಸುವ ದುಷ್ಟ ಪದ್ಧತಿ ಈಗ ಬೆಳಕಿಗೆ ಬಂದಿದೆ.

ಬಿಹಾರದ ಹಲವಾರು ಮಂದಿ ಹರಿಜನ ಗಿರಿಜನರು ಪಂಜಾಬಿನ ಹೋಷಿಯಾರ್‌ಪುರ ಜಿಲ್ಲೆಗೆ ಬಂದಿದ್ದಾರೆ. ಇವರು ತಾವಾಗಿಯೇ ಇಲ್ಲಿಗೆ ಬಂದಿಲ್ಲ. ದಳ್ಳಾಳಿಗಳು ಇವರಿಗೆ ಪ್ರಯಾಣದ ವೆಚ್ಚ ಕೊಟ್ಟು ಕರೆತಂದಿದ್ದಾರೆ. ಸ್ಥಳೀಯ ಜಮೀನುದಾರರ ಬಳಿ ಇವರು ಮೊದಲ ಎರಡು ತಿಂಗಳು ಉಚಿತವಾಗಿ ಕೆಲಸ ಮಾಡಬೇಕಾಗಿದೆ, ಈಗಾಗಲೇ ಹೀಗೆ ಬಂದು ಮೊದಲ ಎರಡು ತಿಂಗಳು ಕಳೆದವರಿಗೆ ಈಗ ತಿಂಗಳಿಗೆ ಕೇವಲ 60ರೂ. ವೇತನ ಕೊಡಲಾಗಿದೆ.

ಈ ಹರಿಜನ ಗಿರಿಜನರನ್ನು ಬಿಹಾರದಿಂದ ಕರೆತಂದ ಏಜೆಂಟರಿಗೆ ಅರ್ಥಾತ್ ದಳ್ಳಾಳಿಗೆ ಹಣ ಸಾಕಷ್ಟು ದೊರೆಯುತ್ತದೆ. ಒಬ್ಬ ಆಳನ್ನು ಕರೆತಂದು ಜಮೀನುದಾರನ ವಶಕ್ಕೆ ಕೊಟ್ಟರೆ ದಳ್ಳಾಳಿಗೆ 285ರೂ. ದೊರೆಯುತ್ತದೆ.

(6ನೇ ಪುಟ ನೋಡಿ)

ಸವಲತ್ತಿಗೆ ಗಿರಿಜನರಾಗಬಯಸಿದ ಹಂಪನಾ ಯತ್ನ ವಿಫಲ

ದಲಿತರ ಹೆಸರಿನಲ್ಲಿ ಇತರರು ಸುಳ್ಳು ಸರ್ಟಿಫಿಕೇಟುಗಳನ್ನು ದಾಖಲುಪಡಿಸಿ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿರುವುದು ಅತ್ಯಂತ ಸಾಮಾನ್ಯವಾದ ವಿಚಾರವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಸೀಟಿಗಾಗಿ ಅರ್ಜಿಹಾಕಿದ ಅಭ್ಯರ್ಥಿಯೊಬ್ಬರು ತಾವು ಗಿರಿಜನ ಎಂದು ನಮೂದಿಸಿ ತಹಸೀಲ್ದಾರರಿಂದ ಪಡೆದ 'ಅರ್ಹತಾ' ಪತ್ರವನ್ನು ಲಗತ್ತಿಸಿದ್ದರು. ಅಡ್‌ಮಿಷನ್ ಕಮಿಟಿಯವರಿಗೆ ಅನುಮಾನ ಬಂದು ಅವರ ಅರ್ಜಿಯನ್ನು ತಡೆಹಿಡಿಯಲಾಯಿತು. ಆದ್ದರಿಂದ ಈ ದೇಶದ ಸಾವಿರಾರು ಗಿರಿಜನರ ಸಂಖ್ಯೆಗೆ ಹೊಸಬರೊಬ್ಬರು ಸೇರುವ ಅವಕಾಶ ತಪ್ಪಿಹೋಯಿತು.

ವಿಚಿತ್ರ ಸಂಗತಿ ಎಂದರೆ ಆ ಅಭ್ಯರ್ಥಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಹಂ. ಪ. ನಾಗರಾಜಯ್ಯನವರ ಮಗ. ಗಿರಿಜನ ಎಂದು ಸರ್ಟಿಫಿಕೇಟ್ ಪಡೆಯಲು ಹಂ. ಪ. ನಾ. ಅವರು ಪ್ರಯತ್ನಿಸಿ ಸಫಲರಾದದ್ದು ಹೇಗೆ? ತಮ್ಮ

ಓದುಗರ ಪತ್ರಗಳು

ಮಗನು ಗಿರಿಜನ ಅಲ್ಲ ಎಂದು ಇಂಜಿನಿಯರಿಂಗ್ ಕಾಲೇಜಿನ ಅಧಿಕಾರಿಗಳು ತೀರ್ಮಾನಿಸಿದ ಮೇಲೆ ಬೆಚ್ಚಿಬಿದ್ದ ಹಂ. ಪ. ನಾ. ಸಂಬಂಧಪಟ್ಟವರ ಹತ್ತಿರ ಹೋಗಿ ವಾದಿಸಿದರು. ಇಂಜಿನಿಯರಿಂಗ್ ಕಾಲೇಜಿನವರು ಇದನ್ನು ನಂಬಲಿಲ್ಲ. ಏಕೆಂದರೆ ಹಂ. ಪ. ನಾ. ಜೈನರು. ನನ್ನ ಹೆಂಡತಿ ಗಿರಿಜನರು ಎಂದು ಪರಿಷತ್ ಅಧ್ಯಕ್ಷರು ಹೇಳಿದರೂ ಪ್ರಯೋಜನ ಆಗಲಿಲ್ಲ. ಯಾಕೆಂದರೆ ಮಗನ ಜಾತಿಯ ನಿರ್ಣಯ ತಂದೆಯ ಜಾತಿಯನ್ನೇ ಅವಲಂಬಿಸಿರುತ್ತದೆ. ಹಂ. ಪ. ನಾ. ಅವರವಾದ ಕೂಡ ಪ್ರಾಮಾಣಿಕವಾದದ್ದಲ್ಲ. ಕಮಲ ಹಂ. ಪ. ನಾ. ಅವರನ್ನು ವಿವಾಹವಾಗುವಾಗ ಅವರಿಗೆ ದೀಕ್ಷೆಯನ್ನು ಕೊಡಿಸಿ ಜೈನರನ್ನಾಗಿ ಮಾಡಿಕೊಂಡರು. ಜೈನ ಮಹಿಳೆಯರ ಸಂಘದ ಅಧ್ಯಕ್ಷಿಣಿ ಆಗಿರುವ ಕಮಲಾ ಹಂ.ಪ.ನಾ. ಅವರು ಪುನಃ ಗಿರಿಜನರಾಗುವ ವಿಚಾರವೇ ಬಹಳ ತಮಾಷೆ. ತಮ್ಮ ಮಗನ ಸೀಟಿನ ಪ್ರಶ್ನೆ ಬಂದಾಗ ಪರಿಷತ್ ಅಧ್ಯಕ್ಷರಿಗೆ ತಮ್ಮ ಹೆಂಡತಿಯ ಮೊದಲ ಜಾತಿ ನೆನಪಾದದ್ದು ಎಂಥ ದುರಂತ.

ಹಂ. ಪ. ನಾ. ಇಷ್ಟಕ್ಕೇ ಬಿಡಲಿಲ್ಲ. ಮಂತ್ರಿಗಳ ಮೊರೆ ಹೊಕ್ಕರು. ತಾವು ಗಿರಿಜನರೆಂದು ಫೋನ್ ಮಾಡಿಸಿದರು. ಇವೆಲ್ಲಾ ವ್ಯರ್ಥವಾಯಿತು. ಇವರು ಗಿರಿಜನರಾಗಲು ಪಟ್ಟ ಪ್ರಯತ್ನ ಗೋಮಟೇಶ್ವರನ ಮೇಲೆ ಮಾಡಿದ ಮಹಾಮಸ್ತಾಭಿಷೇಕವಾಯಿತು.

ಎರಡು ವರ್ಷದ ಹಿಂದೆ "ದಲಿತ ಬಲಿತ ಕಲಿತ" ಎಂದು ದಲಿತ ಸಾಹಿತ್ಯವನ್ನು ಗೇಲಿ ಮಾಡಿದ ಹಂ. ಪ. ನಾ. ತಾವೇ ದಲಿತರಾಗಲು ಹೊರಟಿದ್ದು ಎಂಥ ಆಶ್ಚರ್ಯ. ಎರಡು ಲಾರಿಗಳ ಮಾಲೀಕರು ಅಷ್ಟೇ ಅಲ್ಲ ಲಕ್ಷಾಧೀಶ್ವರ ಹಂ. ಪ. ನಾ. ಅವರು ಗಿರಿಜನರಾಗಲು ನಡೆಸುವ ಬಡ ಗಿರಿಜನರ ಹೊಟ್ಟೆ ಮೇಲೆ ಹೊಡೆಯುವ ಇಂಥ ಪ್ರಯತ್ನಗಳನ್ನೂ ದಲಿತರು ತೀವ್ರವಾಗಿ ಖಂಡಿಸಬೇಕು.

ಬೆಂಗಳೂರು —ಎಸ್. ಎಲ್. ಶಕುನಯ್ಯ

ಸೋದರರ ಪ್ರಕರಣ

ಪರಿಶಿಷ್ಟವರ್ಗದ ಪಟ್ಟಿಗೆ ಸೇರದ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರೆದ 'ಕೋಟಿಯಾರ್' ಜಾತಿಗೆ ಸೇರಿದ ಪಶು ಸಂಗೋಪನಾ ಇಲಾಖೆಯ ಸಹೋದರರಿಬ್ಬರು 'ಕೋಟೆಗಾರ್' ಎಂಬ ಸುಳ್ಳು ಜಾತಿ ಸರ್ಟಿಫಿಕೇಟ್‌ಗಳನ್ನು ಸಲ್ಲಿಸಿ ಹೆಚ್ಚಿನ ಬಡ್ತಿ ಪಡೆದು ದಲಿತ ನೌಕರರಿಗೆ ಮೋಸ ಎಸಗಿರುವ ಪ್ರಕರಣ ಬೆಳಕಿಗೆ ಬಂದಿದೆ

ನಗರ ಪಶುವೈದ್ಯ ಆಸ್ಪತ್ರೆಯಲ್ಲಿ ಸೂಪರ್ ವೈಸರ್ ಆಗಿರುವ ಕೆ. ಉಮೇಶ್ವರ ಅವರು ಸುಳ್ಳು ಜಾತಿ ಹೆಸರಿನಲ್ಲಿ ಎರಡು ಮುಂಬಡ್ತಿಗಳನ್ನು ಪಡೆದಿದ್ದಾರೆ. ಪಶುಸಂಗೋಪನಾ ಇಲಾಖೆಯಲ್ಲೇ ಅಸಿಸ್ಟೆಂಟ್ ಡೈರೆಕ್ಟರ್ ಆಗಿರುವ ಕೆ. ವಿ. ದೇವಪ್ಪ ಅವರು ಸಹ ಸುಳ್ಳು ಜಾತಿ ಸರ್ಟಿಫಿಕೆಟ್‌ನಲ್ಲಿ ಈ ಹುದ್ದೆ ಪಡೆದಿದ್ದಾರೆ. ಇವರು ಉಮೇಶ್ವರ ಅವರ ಸಹೋದರ.

ಈ ಮೋಸದ ಪ್ರಕರಣವನ್ನು ಪಶುಸಂಗೋಪನಾ ಇಲಾಖೆಯ ರೀಜನಲ್ ಡೆಪ್ಯೂಟಿ ಡೈರೆಕ್ಟರ್ ಬೆಂಗಳೂರು ವಿಭಾಗ ಕಚೇರಿ ಅಧಿಕಾರಿಗಳು ಪತ್ತೆ ಹಚ್ಚಿದ್ದರೂ, ಸರ್ಕಾರ ಈ ಬಗ್ಗೆ ಇನ್ನು ಯಾವುದೇ ಕ್ರಮತೆಗೆದುಕೊಳ್ಳದೆ ಇರುವುದರಿಂದ ದಲಿತ ನೌಕರರಿಗೆ ಅನ್ಯಾಯ ಮುಂದುವರಿಸಿದಂತಾಗಿದೆ.

ಸೋಮನ ಹಳ್ಳಿ —ಚಂದ್ರಶೇಖರ್

ದಲಿತ ನುಡಿ

ಶತಶತಮಾನಗಳ ಶೋಷಣೆಯಿಂದ ದಗ್ಧರಾಗಿ ಹೋಗಿರುವ ಬಂಧುಗಳೇ, ನಿಮ್ಮ ಶಕ್ತಿಯನ್ನು ಒಗ್ಗೂಡಿಸಿಕೊಂಡು ಚಳವಳಿಯತ್ತ ಮುನ್ನಡೆಯಿರಿ. ಹೋರಾಟದ ಮೂಲಕ ನಿಮಗೆ ಅಧಿಕಾರ, ಗೌರವ ಮತ್ತು ವಿಮೋಚನೆ ದೊರೆಯುವುದು.

—ಬಿ. ಆರ್. ಅಂಬೇಡ್ಕರ್

ದಲಿತನೊಬ್ಬನ ಕೊಲೆ

(1ನೇ ಪುಟದಿಂದ)

ತಿತ್ತು. ಮತ್ತೆ 17ರಂದು ಇಟಕ ದಿಬ್ಬಕ್ಕೆ ಬಂದ ಪೊಲೀಸರ ಮುಂದೆ "ನನ್ನ ಗಂಡನ್ನ ಕೊಂದು ಅನ್ಯಾಯ ಮಾಡ್ಬಿಟ್ರು, ನನ್ನ ಮಕ್ಕಳ ಬಾಯಿಗೆ ಮಣ್ಣಾಕಿ ಬಿಟ್ರು" ಎಂದು ಗೋಳಿಟ್ಟಳು. ಕೊಲೆಗಡುಕರ ಬಳಿ ಲಂಚ ಪಡೆದ ಪೋಲೀಸರು "ಏಯ್ ನಾಟಕ ಆಡ್ತಿದ್ದಿಯಾ, ಎಲ್ಲಿ ಕಲಿತೆ....... ಮುಚ್ಚು ಬಾಯಿ. ಇಷ್ಟುದಿನ ಎಲ್ಲಿ ಬಿದ್ದಿದ್ದೆ..." ಎಂದು ಗದರಿಸಿ...ಸಾಕ್ಷಿದಾರರನ್ನು ಹೆದರಿಸಿ ಬೆದರಿಸಿ ಬೇಕಾದ ರೀತಿಯಲ್ಲಿ ಸಾಕ್ಷ್ಯ ಪಡೆದರು.

ಬಹಿಷ್ಕಾರದ ಬೆದರಿಕೆ

ಊರಿನ ರೈತರುಗಳೆಲ್ಲ ಒಂದಾಗಿ ಈಗ ದೊಡ್ಡ ಮಲ್ಲಪ್ಪನ ಕೊಲೆಯನ್ನು ಮುಚ್ಚಿಹಾಕಲು ಎಲ್ಲ ಬಗ್ಗೆಯ ಪ್ರಭಾವ ಬಳಸಿ ಪೊಲೀಸರನ್ನು ಹಣದ ಬಲೆಯಲ್ಲಿ ಹಾಕಿಕೊಂಡಿರುವರು. ಜತೆಗೆ ಉಳಿದ ದಲಿತರನ್ನೆಲ್ಲ ಹೆದರಿಸಿ ಮತ್ತೆ ಕೊಲೆ ಬೆದರಿಕೆ ಹಾಕಿದ್ದಾರೆ, ಊರಿನಲ್ಲಿ ಈಗ ಸ್ಮಶಾನ ಮೌನ. ಕೊಲೆ ಸುದ್ದಿ ಎತ್ತಿದರೆ ಬಹಿಷ್ಕಾರದ ಬೆದರಿಕೆ ಮಾತುಗಳು ಕೇಳಿ ಬಂದಿವೆ.

ಈ ಘಟನೆ ತಿಳಿದ ತುಮಕೂರು ದಲಿತ ಸಂಘರ್ಷ ಸಮಿತಿಯ 30 ಜನ ಕಾರ್ಯಕರ್ತರು ಇಟಕ ದಿಬ್ಬಕ್ಕೆ ಹೋಗಿ ದಲಿತರೊಡನೆ ಕೆಲವು ದಿನ ಕ್ಯಾಂಪ್ ಮಾಡಿ ಧೈರ್ಯ ತುಂಬಿದ್ದಾರೆ. ಕೊಲೆಗಡುಕರ ವಿರುದ್ಧ ಕ್ರಮಕ್ಕೆ ಶ್ರಮಿಸುತ್ತಿದ್ದಾರೆ.

ಪ್ರದರ್ಶನ:

ಈ ಕೊಲೆಯ ವಿರುದ್ಧ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಿ ಸೆಪ್ಟೆಂಬರ್ 25ರಂದು ದಲಿತ ಸಂಘರ್ಷ ಸಮಿತಿ ಮಧುಗಿರಿ ಶಾಖೆ ಮಧುಗಿರಿಯಲ್ಲಿ ಪ್ರದರ್ಶನ ನಡೆಸಲಾಯಿತು.

ಕಾವೇರಿ ಎಂಪೋರಿಯಂ ದಲಿತ ನೌಕರರಿಗೆ ಕಿರುಕುಳ

[ಪಂಚಮ ಪ್ರತಿನಿಧಿಯಿಂದ]

ದಲಿತ ನೌಕರರಿಗೆ ಸರಿಯಾಗಿ ರಕ್ಷಣೆ ನೀಡದ ಈ ಸರ್ಕಾರ ಬಿ. ಎ. ಪದವೀಧರ ದಲಿತರೊಬ್ಬರು ಕೇವಲ ಅಟೆಂಡರ್ ಆಗಿ ಮುಂದುವರಿಯಲೂ ಬಿಟ್ಟಿಲ್ಲ ಕೆಲಸಕ್ಕೆ ಸೇರಿ ಒಂದು ವರ್ಷ ಮೂರು ತಿಂಗಳಾದರೂ ಅವರನ್ನು ಖಾಯಂ ಮಾಡದೆ "ತಮ್ಮ ಕೆಲಸದಲ್ಲಿ ತೃಪ್ತಿ ಕಂಡ ಬಾರದೆ ಇರುವುದರಿಂದ ಕೆಲಸದಿಂದಲೇ ನಿಮ್ಮನ್ನು ತೆಗೆಯಲಾಗಿದೆ" ಎಂದು ಬೆಂಗಳೂರಿನ ಕಾವೇರಿ ಆರ್ಟ್ಸ್ ಮತ್ತು ಕ್ರಾಫ್ಟ್ಸ್ ಎಂಪೋರಿಯಂ ಆಡತವರ್ಗ ಎಚ್. ತಿಮ್ಮರಾಜು ಅವರಿಗೆ ಮೋಸ ಎಸಗಿದೆ.

ಕ್ಯಾಷಿಯರ್ ಕಮ್ ಕ್ಲರ್ಕ್ ಆಗಿ ಸೇರಿ ಕುತಂತ್ರ ರಾಜಕೀಯದಿಂದ ಮೂರೇ ತಿಂಗಳಲ್ಲಿ ಮ್ಯಾನೇಜರ್ ಹುದ್ದೆಗೇರಿ ತುಘಲಕ್ ದರ್ಬಾರ್ ನಡೆಸುತ್ತಿರುವ ಸಿ.ಎಂ. ಸುಬ್ಬಯ್ಯ ದಲಿತ ನೌಕರರಿಗೆ ಅನೇಕ ತಿಂಗಳುಗಳಿಂದ ಕಿರುಕುಳ ಕೊಡಲಾರಂಭಿಸಿದ್ದಾನೆ "ನಮ್ಮ ಊರುಗಳಲ್ಲಿ ಜೀತ ಮಾಡುವ ನೀವು ಇಷ್ಟರ ಮಟ್ಟಿಗೆ ಬಂದಿದ್ದೀರಲ್ಲ. ಅಷ್ಟರಲ್ಲೇ ತೃಪ್ತಿಪಡಿ. ನಿಮಗೇನ್ರಿ ಎಲ್ಲಾದರೂ ಕೆಲಸ ಸಿಗುತ್ತೆ, ಇಲ್ಲೇನು ಸಿಗುತ್ತೆ ಹೋಗಿ" ಮುಂತಾಗಿ ದಲಿತ ನೌಕರರನ್ನು ಮಾತನಾಡಿಸುವ ಸುಬ್ಬಯ್ಯ ಬಾಯಿಗೆ ಬಂದ ಹಾಗೆ ಬಯ್ಯುವುದು ಆತನ ಸಾಮಾನ್ಯ ನಡವಳಿಕೆಯಾಗಿಬಿಟ್ಟಿದೆ.

ಅಸ್ಪೃಶ್ಯತೆ ಆಚರಣೆಯ ಮೊಕದ್ದಮೆಯಲ್ಲಿ ಆರೋಪಿಯಾಗಿ ಬಂಧಿತನಾಗಿದ್ದ ಸುಬ್ಬಯ್ಯ ತನಗೆ ಸಚಿವ ಇಬ್ರಾಹಿಂ ಚನ್ನಾಗಿ ಗೊತ್ತೆಂದು ಮತ್ತು ಎಫ್. ಎಂ. ಖಾನ್ ಹೆಂಡತಿ ತಮ್ಮ ಬಂಧುವೆಂದು (ಖಾನ್ ಹೆಂಡತಿ ಹಿಂದೂ) ಹೇಳಿಕೊಂಡು ಈ ಇಬ್ಬರು ರಾಜಕೀಯ ವ್ಯಕ್ತಿಗಳ ಹೆಸರನ್ನು ದುರುಪಯೋಗಪಡಿಸಿಕೊಳ್ಳುತ್ತ ಎಂಪೋರಿಯಂನ ಎಲ್ಲ ನೌಕರರನ್ನು ಬೆರಳಲ್ಲಿ ಆಡಿಸುತ್ತಿದ್ದಾನೆಂದು ಎಲ್ಲರ ದೂರು.

ಇಬ್ರಾಹಿಂ, ಖಾನ್ ಹೆಸರು ಜಪಿಸುತ್ತ ಅಸ್ಪೃಶ್ಯತೆ ಆಚರಣೆಯ ಬಂಧನದಿಂದ ಸುಬ್ಬಯ್ಯ ಕೆಲಕಾಲ ತಪ್ಪಿಸಿಕೊಂಡು ದಲಿತರಿಗೆ ಸತತ ಕಿರುಕುಳ ಕೊಡಲಾರಂಭಿಸಿದ. ಈತನ ಮಿತ್ರಿತರ ಕಿರುಕುಳ ತಡೆಯಲಾರದೆ ಸುಮಾರು 280 ನೌಕರರಿರುವ ಈ ಇಲಾಖೆಯಲ್ಲಿನ 15 ಮಂದಿ ದಲಿತರೆಲ್ಲ ಕೂಡಿ ಇತ್ತೀಚೆಗೆ ಸಂಘವೊಂದನ್ನು ಕಟ್ಟಿಕೊಂಡರು. ದಲಿತ ನೌಕರರ ಸಂಘಟನೆಯಿಂದ ಉರಿದೆದ್ದ ಸುಬ್ಬಯ್ಯ ಸಂಘದ ಪದಾಧಿಕಾರಿಗಳಿಗೆ ಮತ್ತಷ್ಟು ಕಿರುಕುಳ ಕೊಡಲಾರಂಭಿಸಿದ ಅಸ್ಪೃಶ್ಯತಾ ಆಚರಣೆ ವಿರುದ್ಧ ದೂರು ನೀಡಿದ ಸಂಘದ ಪ್ರಧಾನ ಕಾರ್ಯದರ್ಶಿ ಸಿ. ಮರಿಮಾದಯ್ಯ ಎಂಬುವವರನ್ನೇ ಬೇರೆ ಕಡೆಗೆ ವರ್ಗಮಾಡಿಸಿದ.

ಸರ್ಕಾರದ ಕಾನೂನು ಪ್ರಕಾರ ಅಸ್ಪೃಶ್ಯತೆ ಆಚರಣೆಯ ಆರೋಪಕ್ಕೆ ಗುರಿಯಾದವನನ್ನು ಪೋಲೀಸ್ ಮೊದಲು ಬಂಧಿಸಬೇಕು ಮೇಲಾಗಿ ಸರ್ಕಾರ ಆರೋಪಿ ನೌಕರನನ್ನು ತೀರ್ಪು ಬರುವವರೆಗೂ ಸಸ್ಪೆನ್ಷನ್‌ಲ್ಲಿಯಾದರೂ ಇಡಬೇಕು. ಆದರೆ ಇದು ತದ್ವಿರುದ್ಧ. ಕಿರುಕುಳಕ್ಕೆ ಬಲಿಯಾಗುತ್ತಿರುವ ಮರಿಮಾದಯ್ಯ ಅವರನ್ನೇ ಬೇರೆಡೆಗೆ ವರ್ಗ ಮಾಡಲಾಯಿತು. ಈ ಅನ್ಯಾಯದ ವಿರುದ್ಧ ದಲಿತ ಸಂಘರ್ಷ ಸಮಿತಿ ಬೆಂಗಳೂರು ಜಿಲ್ಲಾ ಸಂಚಾಲಕರು, ರಿಸರ್ವ್ ಬ್ಯಾಂಕ್ ದಲಿತ ನೌಕರರ ಪ್ರತಿನಿಧಿಗಳು, ಕೆನರಾ ಬ್ಯಾಂಕ್ ದಲಿತ ನೌಕರರ ಸಂಘದ ಮುಖಂಡರು ರಾಜ್ಯಪಾಲರನ್ನು ಕಂಡು ಮಾತುಕತೆ ನಡೆಸಿದ ನಂತರ ಅಸ್ಪೃಶ್ಯತೆ ಮೊಕದ್ದಮೆಯ ಆರೋಪಿ ಸುಬ್ಬಯ್ಯನನ್ನು ಪೊಲೀಸರು ಕೂಡಲೇ ಬಂಧಿಸಿ ಬಿಡುಗಡೆ ಮಾಡಿರುವರು.

ಪೊಲೀಸ್ ಅತಿಥಿಯಾಗಿ ಬಂದ ಸುಬ್ಬಯ್ಯ ಸೇಡು ತೀರಿಸಿಕೊಳ್ಳಲು ಕೂಡಲೇ ತಿಮ್ಮರಾಜು

(7ನೇ ಪುಟ ನೋಡಿ)

ದಲಿತ ಯುವಕರಿಬ್ಬರಿಗೆ ಅಮಾನುಷ ಹಿಂಸೆ

ವರದಿ : ವಿ. ನಾಗರಾಜು

"ಅಯ್ಯೋ ನನಗೆ ಇಂತಹ ಹಿಂಸೆ ಕೊಡುವ ಬದಲು ಕೊಲ್ಲಬಹುದಿತ್ತು" ಎಂಬ ದಲಿತ ಯುವಕ ನರಸಿಂಹ (25) ಎಂಬಾತನ ನರಳಾಟಕ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಇತರ ರೋಗಿಗಳನ್ನು, ಪ್ರೇಕ್ಷಕರನ್ನು ಮನಃಕರಗಿಸಿ ದುಃಖ ತರುತ್ತದೆ.

ದೇವನಹಳ್ಳಿ ತಾಲ್ಲೂಕಿನ ಬಾಗಲೂರಿನಲ್ಲಿ ಗಣೇಶ ವಿಸರ್ಜನೆಯಲ್ಲುಂಟಾದ ಗಲಭೆಯೊಂದರಲ್ಲಿ ನರಸಿಂಹನನ್ನು ಸವರ್ಣೀಯರು ಓಡಿಸಿಕೊಂಡು ಹಿಡಿದು ಮರಕ್ಕೆ ಕಟ್ಟಿ ಮನಸಾರ ಹೊಡೆದರು. ಕೊನೆಗೆ ಊರಿನ ಹಿರಿಯರೊಬ್ಬರ ಮಾತಿನಂತೆ ಎರಡು ಕಾಲುಗಳ ಹಿಮ್ಮಡಿ ನರಗಳನ್ನು ಎಳೆದು ಸುಮಾರು ಒಂದು ಇಂಚಿನಷ್ಟು ಕೊಯ್ದರು. ಈ ಹೇಯಕೃತ್ಯದಲ್ಲಿ ಬಾಗಲೂರಿನ ಗ್ರಾಮಪಂಚಾಯಿತಿ ಅಧ್ಯಕ್ಷನು ಸೇರಿದ್ದಾನೆ. ಈ ಕೃತ್ಯ ನಡೆಸಿದ 26 ಮಂದಿಯನ್ನು ಪೊಲೀಸರು ನೆಪಮಾತ್ರಕ್ಕೆ ಬಂಧಿಸಿ ಬಿಟ್ಟಿದ್ದಾರೆ.

ಈ ಘಟನೆ ಇಷ್ಟಾದರೆ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಗುಮ್ಮಲಾಪುರದ ಸವರ್ಣೀಯರು ದಲಿತ ಯುವಕ ನಾರಾಯಣಪ್ಪ (25) ಎಂಬಾತನನ್ನು ಸೆಪ್ಟೆಂಬರ್ 13 ರಂದು ರಾತ್ರಿ ಚಾವಡಿಗೆ ಕಟ್ಟಿ ಹೊಡೆದು ಕೊನೆಗೆ ಬಾವಿಗೆ ಹಾಕಿ, ಬಾವಿಗೂ ಕಲ್ಲುತೂರಿ ಚಿತ್ರಹಿಂಸೆ ನೀಡಿದ ದುರ್ಘಟನೆ ನಡೆದಿದೆ.

ಬಾವಿಯಲ್ಲಿ ನಾರಾಯಣಪ್ಪ ಸತ್ತು ಹೋಗಿರಬಹುದೆಂದು ಭಾವಿಸಿ ಸವರ್ಣೀಯರು ಓಡಿಹೋದ ನಂತರ ಬಾವಿಯ ಮೆಟ್ಟಿಲಡಿಯಲ್ಲಿ ಕುಳಿತು ಜೀವ ಉಳಿಸಿಕೊಂಡಿದ್ದ ನಾರಾಯಣಪ್ಪನನ್ನು ಆತನ ಬಂಧುಗಳು ಓಡಿ ಬಂದು ರಕ್ಷಿಸಿ ಈಗ ಕೋಲಾರ ಆಸ್ಪತ್ರೆಯಲ್ಲಿ ಸೇರಿಸಿದ್ದಾರೆ, ನಾರಾಯಣಪ್ಪನನ್ನು ಆತನ ಬಂಧುಗಳು ಓಡಿ ಬಂದು ರಕ್ಷಿಸಿ ಈಗ ಕೋಲಾರ ಆಸ್ಪತ್ರೆಯಲ್ಲಿ ಸೇರಿಸಿದ್ದಾರೆ. ನಾರಾಯಣಪ್ಪನ ಸ್ಥಿತಿ ಮೊದಲು ಚಿಂತಾಜನಕವಾಗಿತ್ತು.

ಸವರ್ಣೀಯ ದೇಕಪ್ಪನ ಮನೆಯಲ್ಲಿ ಜೀತಕ್ಕಿದ್ದ ನಾರಾಯಣಪ್ಪನನ್ನು ದೇಕಪ್ಪನ ಮಗಳು ಪ್ರೇಮಿಸುತ್ತಿದ್ದಳೆಂದು, ನಂತರ ಆಕೆ ಆತನ ಜತೆ ಕೆಲ ತಿಂಗಳು ಬೇರೆ ಊರಿಗೆ ಓಡಿ ಹೋಗಿದ್ದು ಇತ್ತೀಚೆಗೆ ಊರಿಗೆ ಬಂದಿದ್ದಳು. ತಲೆ ಮರೆಸಿಕೊಂಡಿದ್ದ ನಾರಾಯಣಪ್ಪನನ್ನು ಸವರ್ಣೀಯರು ಪತ್ತೆ ಹಚ್ಚಿ ಕರೆತಂದು ಈ ಹಿಂಸೆ ನೀಡಿದರು. ಈ ಸಂಬಂಧದಲ್ಲಿ ಪೊಲೀಸರು ಯಾರ ಮೇಲೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ.

ಅಲಗುಡದಲ್ಲಿ ಸಾಮಾಜಿಕ ಬಹಿಷ್ಕಾರ :

[ಪಂಚಮ ಪ್ರತಿನಿಧಿಯಿಂದ]

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕು ಅಲಗುಡ ಗ್ರಾಮದ ಹರಿಜನರು ಅವಮಾನವೀಯ ಅಸ್ಪೃಶ್ಯತೆ ಆಚರಣೆಗೆ ತುತ್ತಾಗಿ ಈಗ ಊರನ್ನೇ ಬಿಟ್ಟು ತುತ್ತುಕೂಳು, ಆತ್ಮ ಗೌರವ ಮತ್ತು ಪ್ರಾಣ ರಕ್ಷಣೆಗಾಗಿ ಹೈದರಾಬಾದ್‌ನತ್ತ ವಲಸೆ ಹೋಗಲಾರಂಭಿಸಿದ್ದಾರೆ. ಈಗಾಗಲೇ 15 ಕುಟುಂಬಗಳು ಅಲಗುಡವನ್ನು ಖಾಲಿ ಮಾಡಿವೆ.

ಸವರ್ಣೀಯರ ಹೋಟೇಲುಗಳಲ್ಲಿ ಅಸ್ಪೃಶ್ಯತೆ ಆಚರಿಸುತ್ತಿದ್ದ ದೂರಿನ ಮೇಲೆ ಮಂಠಾಳ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಡಿ.ವಿ. ಕಾಂಬ್ಳೆ ಕಾನ್‌ಸ್ಟೇಬಲ್‌ನೊಬ್ಬನ ಜೊತೆ ಅಲಗೂಡಿಗೆ ಬಂದು ಹರಿಜನರನ್ನು ಒಳಕ್ಕೆ ಬಿಡದೆ, ಕಾಫೀ–ತಿಂಡಿ ಕೊಡಲು ಮತ್ತು ಕೊಟ್ಟರು ಅವರಿಗಾಗಿಯೇ ಬೇರೆ ಕಪ್ಪು ಹಿಡಿದ ಲೋಟಗಳನ್ನಿಟ್ಟಿದ್ದ ಹೋಟೆಲ್ ಮಾಲೀಕ ಶಿವರಾಜ ಚನ್ನಪ್ಪ ಬಡದಾಳೆ ಎಂಬಾತನನ್ನು ಬಂಧಿಸಿದರು.

ಶಿವರಾಜನನ್ನು ಸಬ್‌ಇನ್ಸ್‌ಪೆಕ್ಟರ್ ಕಾಂಬ್ಳೆ ಠಾಣೆಗೆ ಕರೆದೊಯ್ಯಲು ಬಸ್ಸನ್ನೇರಿದರು, ಇದನ್ನು ಕಂಡ ಸವರ್ಣೀಯರು ಎಲ್ಲಿದ್ದರೋ ಏನೋ ಕಣ್ಣು ಮುಚ್ಚಿ ಕಣ್ಣು ಬಿಡುವಷ್ಟರಲ್ಲಿ ನೂರಾರು ಮಂದಿ ಬಸ್‌ಸ್ಟ್ಯಾಂಡಿನಲ್ಲಿ ಗುಂಪುಗೂಡಿದರು, ಬಸ್ ಹೊರಟಿತ್ತು. ಬಸ್ಸನ್ನು ತಡೆದರು. ಒಳನುಗ್ಗಿ ಇನ್ಸ್‌ಪೆಕ್ಟರ್ ಕಾಂಬ್ಳೆ ಅವರನ್ನು ಎಳೆದಾಡಿ, ಸಮವಸ್ತ್ರವನ್ನು ಹರಿದುಹಾಕಿ ಮನಸಾರೆ ಥಳಿಸಿ ಗಾಯಗೊಳಿಸಿದರು. ಎಸ್.ಐ. ಜೊತೆ ಅಸಹಾಯಕನಾಗಿದ್ದ ಕಾನ್‌ಸ್ಟೇಬಲ್‌ಗೂ ಕೂಡ ಹೊಡೆದರು. ಎಸ್.ಐ. ಕಾಂಬ್ಳೆ ಸ್ವತಃ ಹರಿಜನರಾದ್ದರಿಂದ ಹಿಂದುಮುಂದು ನೋಡದೆ ಹಲ್ಲೆ ನಡೆಸಿದರು.

ಅನೇಕ ಕಡೆ ಅಸ್ಪೃಶ್ಯತೆ ಆಚರಿಸುತ್ತಿದ್ದ ಮತ್ತು ಹರಿಜನರಿಗೆ ಕಿರುಕುಳ ಕೊಡುತ್ತಿದ್ದ ಶೋಷಕ ಸವರ್ಣೀರ ಮೇಲೆ ಕಾಂಬ್ಳೆಯವರು ಇತ್ತೀಚೆಗೆ ಸಾಕಷ್ಟು ದಿಟ್ಟ ಕ್ರಮ ಕೈಗೊಂಡಿದ್ದರು. ಅಲ್ಲಲ್ಲಿ ಸವರ್ಣೀಯರ ಸೊಕ್ಕು ಅಡಗುತ್ತಿತ್ತು. ಈ ಎಲ್ಲ ಹಿನ್ನೆಲೆಯಲ್ಲಿ ಮಚ್ಚರದಿಂದ ಕತ್ತಿಮಸೆಯುತ್ತಿದ್ದ ಶಿವರಾಜನ ಬಂಧನದಂತಹ ಕಾಲಕ್ಕಾಗಿ ಕಣ್ಣಿಟ್ಟು ಕಾದಿದ್ದರು. ತಾವು ಎಸಗುವ ಅಸ್ಪೃಶ್ಯತೆ, ಕಿರುಕುಳ ಮುಂತಾದ ಅಮಾನುಷ ಕೃತ್ಯಗಳನ್ನು ಮನಗಾಣದ ಭೂಮಾಲೀಕ ಸವರ್ಣೀಯರು ಹರಿಜನರನ್ನು ಮನುಷ್ಯರನ್ನಾಗಿ ಕಾಣದ ದುಷ್ಟರ ವಿರುದ್ಧ ಕ್ರಮಕೈಗೊಂಡ ಕಾಂಬ್ಳೆಯವರ 'ಮಹಾಪಥ'ಕ್ಕಾಗಿ ಅಲಗೂಡಿನ ಹರಿಜನರಿಗೆ ಸಾಮಾಜಿಕ ಬಹಿಷ್ಕಾರದಂತ ಕಿರುಕುಳ ಕೊಡಲಾ[...] ಸಿದ್ದಾರೆ. ಈ ಎಲ್ಲಾ ಘಟನೆ ನಡೆದದ್ದು[...] ದರಿದ್ರ ದೇಶದ ಸ್ವಾತಂತ್ರ್ಯ ದಿನಾಚರ[...] ತಿಂಗಳಾದ ಆಗಸ್ಟ್ 30ರಂದು.

ಕಾಂಬ್ಳೆಯವರ ಮೇಲೆ ಕ್ರೂರ ಸವರ್ಣೀಯ[...] ದೌರ್ಜನ್ಯ ನಡೆಸಿದ ನಂತರ ಸಂಜೆ ಡಿ.ವೈ.ಎಸ್[...] ಅಲಗೂಡಿಗೆ ಬಂದರಾದರೂ ಒಬ್ಬರನ್ನಾದ[...] ಬಂಧಿಸದೆ ಬಂದದಾರಿಗೆ ಸುಂಕವಿಲ್ಲದಂತೆ ಹಿ[...] ಗಿದರು. ಮರುದಿನ ಬಸವಕಲ್ಯಾಣದ ಸ[...] ಇನ್ಸ್‌ಪೆಕ್ಟರ್ ಬಂದು ಆ ಜನರನ್ನು ಬ[...] ಕೂಡಲೇ ಜಾಮೀನಿನ ಮೇಲೆ ಬಿಡು[...] ಮಾಡಿದರು.

ಬಂಧಿತರಾಗಿ ಜಾಮೀನಿನ ಮೇಲೆ ಬಿಡುಗಡೆಯ[...] ಹರಿಜನರ ಮೇಲೆ ಕತ್ತಿ ಮಸೆಯುತ್ತಿರುವವ[...] ಅಲಗೂಡು ಗ್ರಾಮ ಪಂಚಾಯಿತಿ ಅಧ್ಯಕ್ಷ[...] ರಾಮನು ಒಬ್ಬ.

ಈ ಘಟನೆಯಿಂದ ಪೊಲೀಸ್ ಬಂಧನ[...] ಅವಮಾನಿತರಾಗಿ ಚಿತ್ತನೆತ್ತಿಗೇರಿದ ಸವ[...]

ಅಲಗುಡ ಗ್ರಾಮದ ದಲಿತರ ಸಮಸ್ಯೆ ಬಗೆಹರಿದಿಲ್ಲ: ಇನ್ನೂ ತನಕ ಊರಿನ ಸವರ್ಣೀಯರು ಕೂಲಿ ಕೆಲಸಕ್ಕೆ ಕರೆದಿಲ್ಲ. ಸರ್ಕಾರವಾದರೂ ಯಾವುದೇ ರೀತಿಯ ಆರ್ಥಿಕ ಯೋಜನೆಗಳನ್ನು ಹಮ್ಮಿಕೊಂಡಿಲ್ಲ. ಬರೆದುಕೊಂಡ ಮನವಿ ಪತ್ರಗಳು, ವಿಭಾಗಾಧಿಕಾರಿಗಳೊಡಗಿನ ಭೇಟಿ ಎಲ್ಲ ನಿಷ್ಪ್ರಯೋಜನಕಾರಿಯಾಗಿವೆ, ದಲಿತರ ಛಲದ ಹೋರಾಟ ಮುಂದುವರೆದಿದೆ.

ಜಾತಿಗಳ ಹುಟ್ಟು ಮತ್ತು ಬೆಳವ[...]

[ಕಳೆದ ಸಂಚಿಕೆಯಿಂದ]

ಜಾತಿ ಸಂಸ್ಥೆಯು ಬ್ರಾಹ್ಮಣೇತರಲ್ಲಿ ಬೇರು ಬಿಟ್ಟ ಬಗೆಯನ್ನು ಅಧ್ಯಯನ ಮಾಡುವುದು ಸೂಕ್ತವಾಗಿದೆ. ವಿದ್ವಾಂಸರು ಇದಕ್ಕೆ ಎರಡು ಕಾರಣಗಳನ್ನು ಸೂಚಿಸುತ್ತಾರೆ. ಇದು ದೇವರ ಕಟ್ಟಾಜ್ಞೆಯೆಂದು ಕಾನೂನು ಮಾಡಿದ್ದು ಅಥವ ಭಾರತದ ಜನತೆಯ ವಿಚಿತ್ರವಾದ ಸಾಮಾಜಿಕ ಬೆಳವಣಿಗೆಯ ನಿಯಮಕ್ಕನುಸಾರವಾಗಿ ಜಾತಿ ಪದ್ಧತಿ ಹುಟ್ಟಿತು. ಪ್ರಪಂಚದ ಎಲ್ಲಾ ದೇಶಗಳಿಗೂ ಒಬ್ಬೊಬ್ಬ ಕಾನೂನುದಾತ ಅವತರಿಸಿರವುದನ್ನು ಕಾಣುತ್ತೇವೆ. ಭಾರತದಲ್ಲಿ ಮನು ಎಂಬುವನು ಜಾತಿಗಳನ್ನು ಸೃಷ್ಟಿಸಿದ ಎಂದು ನಂಬಲಾಗಿದೆ. ಒಬ್ಬ ಮನುಷ್ಯನ ಲೇಖನಿಯಿಂದ ಒಂದು ವರ್ಗ ಮೃಗಗಳ ಮಟ್ಟಕ್ಕೆ ಇಳಿಯಿತು ಎಂದರೆ ಅದನ್ನು ಕಲ್ಪಿಸಿಕೊಳ್ಳುವುದು ಕೂಡ ಕಷ್ಟವಾಗುತ್ತದೆ, ಜಾತಿಪದ್ಧತಿ ಮನುವಿಗಿಂತಲೂ ಹಿಂದಿನಿಂದಲೂ ಬ[...] ಲ್ಲಿತ್ತು. ಆದ್ದರಿಂದ ಈಗ ಪ್ರಚಲಿತ[...] ಜಾತಿನಿಯಮಗಳನ್ನು ಮನು ಸೂತ್ರೀಕ[...] ನೆಂದು ಹೇಳಬಹುದು. ಇದರ ಅರ್ಥ [...] ಜಾತಿಪದ್ಧತಿಯ ಪರವಾಗಿದ್ದನೆಂದೇ ಅ[...] ಬ್ರಾಹ್ಮಣರು ಜಾತಿಪದ್ಧತಿಯನ್ನು ಸೃಷ್ಟಿಸಿ[...]

ಮೂಲ : ಬಿ.ಆರ್. ಅಂಬೇಡ್ಕರ್

ಸಂಗ್ರಹಾನುವಾದ : ಸಿದ್ಧಲಿಂಗಯ್ಯ

ಎಂದು ಹೇಳಲಾಗಿದೆ. ಬ್ರಾಹ್ಮಣರು [...] ಸೃಷ್ಟಿಯ ಪ್ರಕ್ರಿಯೆಗೆ ತಮ್ಮ ಸಿದ್ಧಾಂತ[...] ಸಹಾಯ ಮಾಡಿದರೆ ಹೊರತು ಅವರೇ ಸೃ[...] ಲಿಲ್ಲ. ಜಾತಿಯನ್ನು ಶಾಸ್ತ್ರಗಳ ಸೃಷ್ಟಿಯೆಂದು [...] ಸಲಾಗಿದೆ. ಆದ್ದರಿಂದ ಜಾತಿಪದ್ಧತಿಯನ್ನು ವಿ[...] ಧಿಸುವಧೈರ್ಯವನ್ನು ಮಾಡುವುದಿಲ್ಲ. ಕೇವಲ ಭೇ[...]

ೂರರಾಜ್ಯಕ್ಕೆ ದಲಿತರ ವಲಸೆ

ದುರೆಲ್ಲ ಒಂದುಗೂಡಿ ಅಂದಿನಿಂದಲೇ ಹರಿಜನ ಗೆ ಸಾಮಾಜಿಕ ಬಹಿಷ್ಕಾರ ಸಾರಿದರು.

ಾಮಾಜಿಕ ಬಹಿಷ್ಕಾರ ಕಾಗ್ನಿಬಲ್ ಅಫೆನ್ಸ್ ನ್ನುವ ಕಾನೂನು ಮತ್ತು ಪುಡುಗೇಂದಾಯ ಂತಹ ಕಾನೂನು ವಿಧಿಗಳೆಲ್ಲ ಹರಿಜನರ ಾಲಿಗೆ ಎಲ್ಲಿ ಹೋದವೋ ತಿಳಿಯದು.

ಈ ಅವಮಾನವೀಯ ಹಿಂಸೆಯಲ್ಲಿ ಸಿಕ್ಕಿ ನರಳು ತ್ತಿರುವ ಆಲಗೂಡು ಹರಿಜನರ ಬಗ್ಗೆ ಕನ್ನಡ ಪ್ರಭ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿ ಕೆಗಳು ಮಾಡಿದ ಸತ್ಯ ಸಂಗತಿಯ ವರದಿ ಯನ್ನು ದಂತಗೋಪುರದಲ್ಲಿ ಕುಂತ ಮುಖ್ಯ ಮಂತ್ರಿ ಗುಂಡೂರಾವ್ ಹರಿಜನರಿಗೆ ಸಾಮಾ ಜಿಕ ಬಹಿಷ್ಕಾರ ಇಲ್ಲವೆಂದು ಲಘುವಾಗಿ ಮಾತನಾಡಿದ್ದಾರೆ. ದಲಿತರ ನೋವನ್ನರಿಯದ ಂತಹ ಗುಂಡೂರಾವ್‌ರ ಹೇಳಿಕೆ ಹೊಸದೇ ನಲ್ಲ ಇದೆಲ್ಲ ಹರಿಜನರ ಬಕಿದುನೊಡನೆ ಚಲ್ಲಾ ಟವಾಡುವ ಕಾಂಗ್ರೆಸ್ ಸರ್ಕಾರದ ಕ್ರೂರ ನಡವ ಳಿಕೆಯ ಒಂದು ದೃಷ್ಟಾಂತ ಅಷ್ಟೆ.

ಗೆ-೩

ನೆಯಿಂದ ಜಾತಿಯನ್ನು ಸೃಷ್ಟಿಸುವುದಾಗಲಿ ನಾಶ ಗೊಳಿಸುವುದಾಗಲಿ ಸಾಧ್ಯವಿಲ್ಲ.

ಭಾರತದಲ್ಲಿ ಜಾತಿಪದ್ಧತಿಯ ಪ್ರಸರಣವನ್ನು ಅಧ್ಯಯನಮಾಡಲು ಶ್ರೇಷ್ಠ ವ್ಯಕ್ತಿಗಳ ಸಿದ್ಧಾಂ ತಗಳು ಸಹಾಯಕ್ಕೆ ಬರುವುದಿಲ್ಲ. ಪಾಶ್ಚಿ ಮಾತ್ಯ ವಿದ್ವಾಂಸರು ನಾಯಕ ಆರಾಧನೆಗೆ ಹೆಚ್ಚು ಮಹತ್ವಕೊಡದೆ ಇದನ್ನು ವಿವರಿಸಲು ಪ್ರಯತ್ನ ಪಟ್ಟಿದ್ದಾರೆ. ಜಾತಿಪದ್ಧತಿಯ ಮೂಲ ಅವರಿಗೆ ಹೀಗೆ ಕಂಡಿದೆ.

1. ವೃತ್ತಿ 2. ಬುಡಕಟ್ಟು ಜನಾಂಗದ ಹಳೆ ಮುಳಿಕೆಗಳು 3. ಹೊಸ ನಂಬಿಕೆಯ ಉದ್ಭವ 4. ಮಿಶ್ರತಳಿ 5. ವಲಸೆ.

ಇಲ್ಲಿ ಕಾಣಿಸಿದ ಸ್ಥಿತಿಗಳು ಪ್ರಪಂಚದ ಯಾವ ಭಾಗದಲ್ಲೂ ಇರಲಿಲ್ಲವೆ? ಎಂಬುದು ನನ್ನ ಪ್ರಶ್ನೆ.

ಆಲಗೂಡಿನ ಈ ಪರಿಸ್ಥಿತಿ ತಿಳಿದು ಕಲ್ಬುರ್ಗಿ ಜಿಲ್ಲೆ ದಲಿತ ಸಂಘರ್ಷ ಸಮಿತಿ ಮತ್ತು ಬಸವ ಕಲ್ಯಾಣ ಶಾಖೆಯ ಕಾರ್ಯಕರ್ತರು ಖುದ್ದು ಭೇಟಿನೀಡಿ ನಿಜ ಪರಿಸ್ಥಿತಿಯ ಬಗ್ಗೆ ಬೀದರ್ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರೂ ಯಾವ ಪ್ರಯೋಜನವೂ ಆಗದೇ ಹೋದದನ್ನು ಪ್ರತಿ ಭಟಿಸಲು ಸೆಪ್ಟಂಬರ್ 16ರಂದು ಬಸವಕಲ್ಯಾಣ

ಅಧಿಕಾರದ ಬಲವಿದ್ದರೂ ಹಣ-ಜಾತಿಗಾಗಿ ಸವರ್ಣೀಯರ ಜೊತೆ ಸ್ಥಳೀಯ ಅಧಿಕಾರಿಗಳು ಪಾಲುದಾರರಾಗಿರುವುದರಿಂದ ಕೆಲವು ಹರಿಜನರನ್ನು ಕೊಲೆ ಮಾಡುವುದಾಗಿ ಆಲಗೂಡಿನ ಹಲ್ಲೇ ಕೋರ ಸವರ್ಣೀಯರು ಬಹಿರಂಗವಾಗಿ ಹೇಳಿ ಕೊಂಡು ತಿರುಗಾಡುತ್ತ ಹರಿಜನರಲ್ಲಿ ಮತ್ತಷ್ಟು ಭೀತಿ ಉಂಟುಮಾಡಿದ್ದಾರೆ.

ಈ ನಡುವೆ ಸರ್ಕಾರ ಹರಿಜನರ ಮೇಲೆ ಹಲ್ಲೆ ನಡೆಸುವ ಸವರ್ಣೀಯರ ಕೂದಲನ್ನೂ ಅಲುಗಾಡಿಸದೆ ನಿಷ್ಕ್ರಿಯವಾಗಿರು ವುದು ಹೇಯತನ.

ಕಳೆದ ಮೂರ್ನಾಲ್ಕು ವರ್ಷಗಳಿಂದ ಆಲಗುಡ ಗ್ರಾಮದ ದಲಿತರು ಹೊಲೆಯರು ಕೀಳು ಕೆಲಸ ಮಾಡುವುದನ್ನು ಬಿಟ್ಟು ಬಿಟ್ಟರು. ಸವರ್ಣೀಯರೊಂದಿಗೆ ಸಮಾನತೆಯಿಂದ ಬದುಕಲು ಆಶಪಟ್ಟರು. ಈಆಸೆಯನ್ನು ಪ್ರೇರೇಪಿಸಿದ ಶಕ್ತಿ(ಬುದ್ಧನ)ಯ ಮಂದಿರ ಕಟ್ಟತೊಡ ಗಿದರು. ಹಿಂದೂ ದೇವರುಗಳನ್ನು ತಿರಸ್ಕರಿಸಿ ಬುದ್ಧನನ್ನು ಮಾತ್ರ ನಂಬಿದರು. ಯಾರಿಗೂ ತಲೆ ಬಾಗದಿರಲು ನಿರ್ಧರಿಸಿದರು. ಇದೆಲ್ಲ ಜಾತ್ಯಂಧ ಸವರ್ಣೀಯರನ್ನು ಕೆರಳಿಸಿತು. ಒಟ್ಟಾಗುತ್ತಿದ್ದ ಈ ಸವರ್ಣೀಯರ ಸಿಟ್ಟು ಶ್ರೀ ಕಾಂಬಳೆ ಅವರ ಹಲ್ಲೆಯ ಹಾಗೂ ದಲಿತರ ಮೇಲೆ ಸಾಮಾಜಿಕ ಬಹಿಷ್ಕರ ಹಾಕುವ ರೂಪದಲ್ಲಿ ವ್ಯಕ್ತಗೊಂಡಿತು.

ದಲ್ಲಿ ಸಂಘರ್ಷ ಸಮಿತಿ ಬೃಹತ್ ಮೆರವಣಿಗೆ ನಡೆಸಿ ಹರಿಜನರ ಮೇಲಿನ ಹಲ್ಲೆಯನ್ನು ಖಂಡಿ ಸಿತು.

ಕೋಟನೂರಿನಲ್ಲಿ ಬಹಿಷ್ಕಾರ

ಕಲ್ಬುರ್ಗಿಯಿಂದ ಕೇವಲ 4 ಕಿ. ಮೀ ದೂರವಿ ರುವ ಕೋಟನೂರ ಗ್ರಾಮದ ಸುಮಾರು 42 ದಲಿತ ಕುಟುಂಬಗಳಿಗೆ ಆ ಊರಿನ ಸವರ್ಣೀ ಯರೂ ಸಹ ಇತ್ತೀಚೆಗೆ ಸಾಮಾಜಿಕ ಬಹಿ ಷ್ಕಾರ ಹಾಕಿದ್ದಾರೆ.

ಅಂಗಡಿಗಳಲ್ಲಿ ದಲಿತರಿಗೆ ದವಸಧಾನ್ಯ ನಿರಾಕ ರಣೆ, ಸಾರ್ವಜನಿಕ ಬಾವಿಗಳ ನೀರು ತೆಗೆ ಯಲು ಅಡ್ಡಿ ಮತ್ತು ಬೀದಿಯಲ್ಲಿ ಹೋಗುವ ದಲಿತ ಮಕ್ಕಳನ್ನು ತಮ್ಮ ಮಕ್ಕಳಿಂದ ಹೊಡೆಸಿ ಗಹಗಹಿಸಿ ನಗುವ ದೃಶ್ಯ ಸಾಮಾನ್ಯವಾಗಿದೆ.

ವಿಶೇಷ ಲೇಖನ

ಪ್ರಪಂಚದ ಎಲ್ಲಾ ಕಡೆಯೂ ಇವು ಇದ್ದ ಪಕ್ಷದಲ್ಲಿ ಅಲ್ಲೆಲ್ಲಾ ಜಾತಿಪದ್ಧತಿ ಸೃಷ್ಟಿಯಾಗ ಬೇಕಾಗಿತ್ತು. ಆ ದೇಶಗಳು ವೇದ ಭೂಮಿ ಗಿಂತ ಪವಿತ್ರವಾದವು ಅಥವಾ ವಿದ್ವಾಂಸರೇ ತಪ್ಪು ಮಾಡಿದ್ದಾರೋ ಎಂಬ ಅನುಮಾನ ನನಗೆ ಬರುತ್ತದೆ. ಎರಡನೇ ಮಾತೇ ಹೆಚ್ಚು ಸಂಭವನೀಯ. ಜಾತಿಪದ್ಧತಿಯ ಬಗ್ಗೆ ಸಿದ್ಧಾಂ ತಗಳನ್ನು ಮಂಡಿಸಿದ್ದ ಸರ್ ಡೇಜಿಲ್ ಇಬೆಟಸನ್(Sir Denzil Ibbetson) ಮತ್ತು ನೆಸ್‌ಫೀಲ್ಡ್ (Nesfield) ಸೆನಾರ್ಟ(Senart) ಹೆಚ್. ರೈಸಲಿ(H.Risely) ಇವರ ಸಿದ್ಧಾಂತಗಳೆ ಇದೇ ರೀತಿಯವಾಗಿವೆ. ಜಾತಿಪದ್ಧತಿಯ ಮೂಲ ಕಸುಬು ಎಂದು ಹೇಳಿದ್ದು ನನಗಂತೂ ತೀರಾ ಸರಳ ಸಂಶೋಧನೆ ಎನಿಸುತ್ತದೆ. ವೃತ್ತಿ ಗುಂಪು, ವೃತ್ತಿಜಾತಿಯಾಗಿ ಪರಿವರ್ತನೆಯಾ ದದ್ದು ನಿಗೂಢವಾದ ಅಂಶವಾಗಿದೆ.

ಹಿಂದೂ ಸಮಾಜವು ನಾಲ್ಕು ವರ್ಗಗಳಿಂದ ರೂಪಿತವಾಗಿದೆ.

1. ಬ್ರಾಹ್ಮಣರು ಅಥವಾ ಪುರೋಹಿತವರ್ಗ
2. ಕ್ಷತ್ರಿಯ ಅಥವಾ ಸೈನಿಕವರ್ಗ
3. ವೈಶ್ಯರು ಅಥವಾ ವ್ಯಾಪಾರಿಗಳು
4. ಶೂದ್ರರು ಅಥವಾ ಶ್ರಮಜೀವಿಗಳು.

(7ನೇ ಪುಟ ನೋಡಿ)

ಗಾಂಧಿ ನೆನಪು

ಧನ್ಯ ಧನ್ಯ ಗಾಂಧಿ ನಿನ್ನ ಜನ್ಮವು
ನಿನ್ನವಾದ ಲೋಕಕ್ಕೆಲ್ಲ ಪ್ರಚುರವು
ಇಂಡ್ಯಾದಲ್ಲಿ ಪೂಜ್ಯವು.

ಬಿರುದುಂಟು ನಿನಗೆ-
'ರಾಷ್ಟ್ರಪಿತ'
ಬಂದಿತದು-
ನೆಹರು ಕೆಬಿನೆಟ್ ಪರದೆ ಹಿಂದೆ
ಓSS ಟಾಟಾ ಬಿರ್ಲಾರ ಸಾಕು ತಂದೆ
ನೀನು ಇಂದಿರಮ್ಮನ ಗ್ರ್ಯಾಂಡ್ ತಂದೆ
'ಹರಿಜನರ ಪೊಲಿಟಿಕಲ್' ತಂದೆ.

ಇತಿಹಾಸದೊಳಗುಂಟು:-
ಸಂನ್ಯಾಸಿ ವೇಷ ಹಾಕಿದರು ನಿನಗೆ
ಅರೆ ನಗ್ನ ಫಕೀರ-
ಕಿರೀಟ ಬೋಳು ತಲೆಗೆ
ಚಕ್ರಾಧಿವೇಶನಕೆ ಕರೆ ತಂದರು
ಜಿನ್ನಾರ ಹದಿನಾಕಂಶಗಳು ಸರಿಯೆನಿಸಿದರು
ದಲಿತರ ಸ್ವಾತಂತ್ರ್ಯವ ಗುಡಿಸಿ ಸಾರಿಸಿ ಬಿಟ್ಟರು-
ಪರಕೀಯರ ಕಾಲಕೆಳಗೆ.

ಅಷ್ಟಕೇ ಬಿಡರು;
ರಾಜ ಘಾಟ್‌ನಲ್ಲಿ ರಾಜ್ಯ ಕಿತ್ತರು
ಬೆಳ್ಳಿಯಲ್ಲಿ ಬೆಂಕಿ ಹಚ್ಚಿದರು
ನಿನ್ನಾತ್ಮ ಶಾಂತಿಗೆಂದು-
ದಲಿತರಿಗೆಂದೆಂದೂ-
ಆಗ ಗುಂಡಿಟ್ಟು ಕೊಂದರು
ಈಗ ಸಮಾಧಿ ಕಟ್ಟಿದರು.

ಯಾರಿವರು ?
ಇವರೆ–ನಿಮ್ಮ ಜಾತಿಯವರು
ಏನಂದಿರಿ ?
ಮಾನಗೆಟ್ಟವರೆ ?
ಅದೇನೋ(ನಿಮ್ಮಿಂದದ ಅವರು ಕಲಿತರೋ
ಅವರಿಂದದ ನೀವು ಕಲಿತಿರೋ) ತಿಳಿಯದು.

ಆದರೆ–
ನಿಮ್ಮ ಹದಿನಾಕಂಶದವರು
ಮಾನವಂತರೆ ಇರಬೇಕಲ್ಲವೆ ?
ಯಾಕೆಂದರೆ–
ಕೋಲಾರದಲ್ಲಿ ನಿಮಗೆ
ಸಾಬರ ಮಸಣದ
ವಾಚ್‌ಮನ್ ಕೆಲಸ ಕೊಡಿಸಿದರಂತೆ-
(ಕಂಗ್ರ್ಯಾಜುಲೇಷನ್)

ಆದರೆ, ಒಂದು ಪ್ರಶ್ನೆ:
ರೆಸ್ಪೆಕ್ಟೆಡ್ ಸಾರ್–
ನೀವು ಆರೆಸ್ಸೆಸಿಗೆಂದಾದರೂ ಹೋಗಿದ್ರಾ ?
ಯಾಕೆಂದರೆ,
ನಿಮ್ಮ ದೊಣ್ಣೆ ಅವರ ಥರಾನೆಯಿದೆ,.

ಧನ್ಯಧನ್ಯಗಾಂಧಿ ನಿನ್ನ ದೊಣ್ಣೆಯು
ಸಾಬರ ಮಸಣ ಕಾದ ನೀನು
ಆರಸೆಸ್ ದೊಣ್ಣೆಯು
ದಲಿತರನ್ನು ಇಲಿಗಳಂತೆ
ಬಡಿಯ ಬಂದ ದೊಣ್ಣೆಯು.

—ಮನಜ

ಜೀತದಾಳುಗಳ ಮಾರಾಟ

(1ನೇ ಪುಟದಿಂದ)

ಮಹಾರಾಷ್ಟ್ರದಲ್ಲಿ

ಹರಿಜನ-ಗಿರಿಜನರನ್ನು ಜೀತಕ್ಕೆ ಸಿಕ್ಕಿಸುವ ಇನ್ನೊಂದು ಬಗೆಯ ದುಷ್ಟ ಪದ್ಧತಿ ಮಹಾರಾಷ್ಟ್ರದಲ್ಲಿ ಹಬ್ಬಿದೆ ವಾರ್ಲಿ ಅಥವಾ ಮಹಾದೇವ್ ಕೋಲಿ ಪಂಗಡದ ಯುವಕರ ವಿವಾಹವನ್ನು ಸಾಮಾನ್ಯವಾದಿ ಭಾರಿ ವೈಭವದಿಂದ ಆಚರಿಸಲಾಗುತ್ತದೆ. ಅದಕ್ಕಾಗಿ ಸಾಲ ಕೊಡುವ ಭಾರಿ ಹಣವಂತರ ಹಾಗೂ ಜಮೀನುದಾರರ ಬಳಿ ಈ ಯುವಕರು ಕೆಲಸ ಮಾಡಬೇಕಾಗುತ್ತದೆ. ಈ ಸಾಲಕ್ಕೆ ಬಡ್ಡಿ ಚಕ್ರ ಬಡ್ಡಿಗಳು ಸೇರಿ, ಕೊಡಬೇಕಾದ ಸಾಲ ಮೂರು ನಾಲ್ಕು ಪಟ್ಟು ಹೆಚ್ಚುತ್ತಲೇ ಹೋಗುತ್ತದೆ. ಸಾಲ ತೆಗೆದುಕೊಂಡವನು ಜಮೀನುದಾರನ ಜೀತದಾಳಾಗಿ ಕೊನೆಗಾಲದ ವರೆಗೂ ದುಡಿಯಬೇಕಾಗುತ್ತದೆ.

"ಜೀತಪದ್ಧತಿ ನಮ್ಮ ರಾಜ್ಯದಲ್ಲಿಲ್ಲ" ಎಂದು ಈ ದೇಶದ ಇಪ್ಪತ್ತು ರಾಜ್ಯಗಳು ಹೇಳುತ್ತಿವೆ. ಆದರೂ ಈ ಪದ್ಧತಿ ಒಂದಲ್ಲ ಒಂದು ರೀತಿಯಲ್ಲಿ ಇದ್ದೇ ಇದೆ.

ಪತ್ತೆಯಾಗದೆ ಇರುವ ಜೀತದಾಳುಗಳನ್ನು ಗುರುತಿಸುವ ಕಾರ್ಯ ಅಗತ್ಯವಾಗಿ ಆಗಬೇಕಾಗಿದೆ. ವಿಮುಕ್ತ ಜೀತದಾಳುಗಳ ಮರುವಸತಿಗೆ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ.

ಅಂಕಿ-ಅಂಶ

ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು, ಒರಿಸ್ಸಾ, ಗುಜರಾತ್, ಮಹಾರಾಷ್ಟ್ರ, ಬಿಹಾರ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ 195 ಜಿಲ್ಲೆಗಳಿಗೆ ಸೇರಿದ ಒಂದು ಸಾವಿರ ಗ್ರಾಮಗಳಲ್ಲಿ ಜೀತಪದ್ಧತಿಯ ಬಗ್ಗೆ ಸಮೀಕ್ಷಾ ಕಾರ್ಯವೊಂದನ್ನು ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಗಾಂಧೀಶಾಂತಿ ಪ್ರತಿಷ್ಠಾನದ ನೆರವಿನಿಂದ ಕೈಗೊಂಡಿದೆ.

ಈ ರಾಜ್ಯಗಳಲ್ಲಿನ ಕೃಷಿ ಕಾರ್ಮಿಕರ ಪೈಕಿ ಸುಮಾರು ಶೇಕಡ 7ರಷ್ಟು ಮಂದಿ ಜೀತದಾಳುಗಳು. ಇವರ ಸಂಖ್ಯೆ ಸುಮಾರು ಇಪ್ಪತ್ತೆರಡು ಲಕ್ಷ, ಇಷ್ಟೇ ಅಲ್ಲ, ದೇಶದಲ್ಲಿನ ಒಟ್ಟು ಕೃಷಿ ಕಾರ್ಮಿಕರ ಪೈಕಿ ಶೇಕಡ 4.2ರಷ್ಟು ಮಂದಿ ಜೀತದಾಳುಗಳು ಇದ್ದಾರೆ.

—ವಿ. ಆರ್. ಶ್ಯಾಂ

ಪತ್ರಿಕಾಲಯಗಳ ಮೇಲಿನ ಕಾಂಗ್ರೆಸ್ ಗೂಂಡಾದಾಳಿ ವಿರುದ್ಧ

ಅನೇಕ ಕಡೆ ಪ್ರದರ್ಶನ

ತಮ್ಮನ್ನು ಹೊಗಳಿ ಅಟ್ಟಕ್ಕೇರಿಸುವ ದಾಟಿಯಲ್ಲಿ ಬರೆಯುತ್ತಿಲ್ಲವೆಂದು ಕುಪಿತಗೊಂಡು ಪತ್ರಕರ್ತರನ್ನು ತುಚ್ಛವಾಗಿ ಬೈಯ್ದ ಮುಖ್ಯಮಂತ್ರಿ ಗುಂಡೂರಾವ್ ಮತ್ತು ಪತ್ರಿಕಾಲಯಗಳ ಮೇಲೆ ದಾಳಿ ನಡೆಸಿದ ಕಾಂಗ್ರೆಸ್ ಗೂಂಡಾಗಳ ಕೃತ್ಯವನ್ನು ಖಂಡಿಸಿ ಸೆಪ್ಟಂಬರ್-24 ರಂದು ಬೆಂಗಳೂರಿನಲ್ಲಿ ಪತ್ರಕರ್ತರು ಮತ್ತಿತರ ಕಾರ್ಮಿಕ ಸಂಘಗಳು ನಡೆಸಿದ ಪ್ರತಿಭಟನಾ ಪ್ರದರ್ಶನದಲ್ಲಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಭಾಗವಹಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಜನತಂತ್ರದಲ್ಲಿ ನಂಬಿಕೆ ಉಳ್ಳವರು ಕಾಂಗ್ರೆಸ್ ಗೂಂಡಾಕೃತ್ಯಗಳನ್ನು ಖಂಡಿಸಬೇಕೆಂದು ಸಂಘರ್ಷ ಸಮಿತಿಯ ಬೆಂಗಳೂರು ಜಿಲ್ಲಾ ಸಂಚಾಲಕ ಎಂ. ವೆಂಕಟಸ್ವಾಮಿ ಅವರು ಹೇಳಿಕೆಯೊಂದನ್ನು ನೀಡಿ ಪತ್ರಿಕಾ ಸ್ವಾತಂತ್ರ್ಯ ಹರಣ ಮಾಡಲೆತ್ನಿಸಿದ ಈ ಗೂಂಡಾಗಳ ಮೇಲೆ ಈಗಿನ ಸ್ಥಾನಬದ್ಧತಾ ಆಜ್ಞೆ ಮೇರೆಗೆ ಬಂಧಿಸಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸಿದರು.

ಪತ್ರಿಕಾಲಯದ ಮೇಲೆ ನಡೆದ ಕಾಂಗ್ರೆಸ್ ಗೂಂಡಾದಾಳಿಯನ್ನು ಖಂಡಿಸಿ ಕೋಲಾರದಲ್ಲಿ ನಡೆದ ಪ್ರಗತಿಪರ ಸಂಘಗಳ ಪ್ರದರ್ಶನದಲ್ಲೂ ಕೋಲಾರ ಜಿಲ್ಲಾ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪಾಲ್ಗೊಂಡಿದ್ದರು. ದ.ಸಂ.ಸ. ಚಿಕ್ಕಮಗಳೂರು ಶಾಖೆ ಮತ್ತು ಧಾರವಾಡ ಶಾಖೆಗಳೂ ಪ್ರದರ್ಶನ ನಡೆಸಿವೆ.

ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಹೋಬಳಿ ಕಂಚಿನಕಲ್ಲುದುರ್ಗದ ಕ್ರೂರ ಭೂಮಾಲಿಕ ಕೆ. ಆರ್. ಚಂದ್ರಶೇಖರ್ ಹಾಗೂ ಆತನ ಸಂಬಂಧಿಕರು ಸೆಪ್ಟಂಬರ್ 4 ರಂದು ದಲಿತ ಮಹಿಳೆಯನ್ನು, ಅವರ ಗುಡಿಸಲಿಗೆ ಬೆಂಕಿ ಇಟ್ಟು ಭಸ್ಮ ಮಾಡಿದ ಕೃತ್ಯವನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ ಸೆಪ್ಟಂಬರ್ 20 ರಂದು ಆಲ್ದೂರಿನಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಸಿ ಚಂದ್ರಶೇಖರನ ವಿರುದ್ಧ ಕ್ರಮಕ್ಕೆ ಒತ್ತಾಯಿಸಲಾಯಿತು. ರಾಜ್ಯ ಸಂಚಾಲಕ ಬಿ. ಕೃಷ್ಣಪ್ಪ ಅವರು ಅಂದಿನ ಸಭೆ ಅಧ್ಯಕ್ಷತೆ ವಹಿಸಿದ್ದರು. ಕೊನೆಯಲ್ಲಿ 'ಸುಟ್ಟಮನೆ' ನಾಟಕ ಪ್ರದರ್ಶಿಸಲಾಯಿತು.

ಶಾಸಕನ ವಿರುದ್ಧ ಪ್ರದರ್ಶನ

ದಲಿತನೌಕರರನ್ನು ತುಚ್ಛವಾಗಿ ಬೈಯುವುದು ಮತ್ತಿತರ ಕಿರುಕುಳ ಕೊಡುತ್ತಿರುವ ಹಾಸನಕ್ಷೇತ್ರದ ಶಾಸಕ ಕೆ.ಎಚ್. ಹನುಮೇಗೌಡನ ದಲಿತ ವಿರೋಧಿ ನಿಲುವು ಖಂಡಿಸಿ ದಲಿತ ಸಂಘರ್ಷ ಸಮಿತಿ ಹಾಸನ ಜಿಲ್ಲಾ ಘಟಕವು ಸೆಪ್ಟಂಬರ್ 20 ರಂದು ಪ್ರತಿಭಟನಾ ಪ್ರದರ್ಶನ ನಡೆಸಿತು.

ದ.ಸಂ.ಸ ಶಾಖೆ ಆರಂಭ

ಕೋಲಾರ ತಾಲ್ಲೂಕು ನರಸಾಪುರ ಹೋಬಳಿ ಮಟ್ಟದಲ್ಲಿ ದಲಿತ ಸಂಘರ್ಷ ಸಮಿತಿ ಶಾಖೆಯೊಂದನ್ನು ಸೆಪ್ಟೆಂಬರ್ 14ರಂದು ಆರಂಭಿಸಲಾಯಿತು. ಕೋಲಾರ ಜಿಲ್ಲಾ ಸಂಚಾಲಕ ಸಿ.ಮುನಿಯಪ್ಪ ಶಾಖೆಯ ಉದ್ಘಾಟನೆ ಮಾಡಿದರು. ಅಂದು ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿದ್ಧಲಿಂಗಯ್ಯ ಮಾತನಾಡಿ ದಲಿತರ ವಿಮೋಚನೆಯ ಹೋರಾಟದ ಅಗತ್ಯವನ್ನು ಒತ್ತಿ ಹೇಳಿದರು. ಬೆಂಗಳೂರು ಜಿಲ್ಲಾ ಸಂಚಾಲಕ ಎಂ. ವೆಂಕಟಸ್ವಾಮಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಒತ್ತಾಯ

ಹೊಸದಾಗಿ ಸ್ಥಾಪಿಸಲಾಗಿರುವ ಕಲ್ಬುರ್ಗಿ ವಿಶ್ವವಿದ್ಯಾನಿಲಯಕ್ಕೆ ಡಾ ಬಿ ಆರ್. ಅಂಬೇಡ್ಕರ್ ಅವರ ಹೆಸರನ್ನಿಡಬೇಕೆಂದು ದಲಿತ ಸಂಘರ್ಷ ಸಮಿತಿ ಕಲ್ಬುರ್ಗಿ ಜಿಲ್ಲಾ ಸಂಚಾಲಕ ಡಿ. ಜಿ. ಸಾಗರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮ

ಬೆಂಗಳೂರು ಜಗಜೀವನರಾಂ ನಗರ ಬಡಾವಣೆಯಲ್ಲಿ ಸೆಪ್ಟಂಬರ್ 2ರಂದು ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ಬೆಂಗಳೂರು ದಲಿತ ಸಂಘರ್ಷಸಮಿತಿ ಕಾರ್ಯಕರ್ತರು ಶೋಷಿತರ ದುಃಖ ದುಮ್ಮಾನಗಳನ್ನು ಕುರಿತ ಹಾಡುಗಳನ್ನು ಹಾಡಿ ಸಾಂಸ್ಕೃತಿಕಕಾರ್ಯಕ್ರಮ ನಡೆಸಿಕೊಟ್ಟರು.

ದ ಸಂ ಸ ಕಾರ್ಯಕರ್ತ ಇಂದೂಧರ ಹೊನ್ನಪುರ ಅವರ ಅಧ್ಯಕ್ಷತೆಯಲ್ಲಿನಡೆದ ಸಮಾರಂಭವನ್ನು ಉದ್ದೇಶಿಸಿ ವೆಂಕಟಸ್ವಾಮಿ ಮತ್ತು ನಾಗರಾಜ್ ಮಾತನಾಡಿದರು.

ಜಾತಿಗಳು ಹುಟ್ಟು ಮತ್ತು ಬೆಳವಣಿಗೆ

(3ನೇ ಪುಟದಿಂದ)

ವರ್ಗಪದ್ಧತಿಯಲ್ಲಿ ಯಾವನೇ ವ್ಯಕ್ತಿ ಸೂಕ್ತ ತರಪೇತಿಯನ್ನು ಪಡೆದು ತನ್ನ ವರ್ಗವನ್ನು ಬದಲಾಯಿಸಬಹುದಾಗಿತ್ತು. ಚರಿತ್ರೆಯ ಒಂದು ಘಟ್ಟದಲ್ಲಿ ಸಮಾಜದ ಉಳಿದ ಜನರಿಗಿಂತ ದೂರ ಇದ್ದ ಪುರೋಹಿತವರ್ಗ ಬಾಗಿಲು ಮುಚ್ಚಿಕೊಳ್ಳುವ ಪ್ರವೃತ್ತಿಯ ಮೂಲಕ ತಾನೇ ಒಂದು ಜಾತಿಯಾಯಿತು. ಬೇರೆ ವರ್ಗಗಳಲ್ಲಿ ಸಮಾಜ ವಿಭಜನೆಯ ನಿಯಮಗಳು ವ್ಯತ್ಯಾಸಗೊಂಡು ಅವು ಸಣ್ಣ ಮತ್ತು ದೊಡ್ಡ ಗುಂಪುಗಳಾಗಿ ಒಡೆದವು. ವೈಶ್ಯರು ಮತ್ತು ಶೂದ್ರ ವರ್ಗಗಳು ಅಸಂಖ್ಯಾತ ಜಾತಿಗಳಿಗೆ ಮೂಲವಾಗಿದ್ದವು. ಯುದ್ಧಕಲೆಯನ್ನು ಅವಲಂಬಿಸಿದ್ದ ಕ್ಷತ್ರಿಯವರ್ಗ ಹೆಚ್ಚು ಹೋಳುಗಳಾಗಲಿಲ್ಲ. ಅದು ಆಡಳಿತಗಾರರು ಮತ್ತು ಸೈನಿಕರು ಎಂದು ಎರಡು ಭಾಗವಾಯಿತು ಎನ್ನಬಹುದು. ಒಂದು ಸಮಾಜದಲ್ಲಿ ಉಪ ಗುಂಪುಗಳು ಸಹಜ. ಆದರೆ ಇಲ್ಲಿಯ ಅಸಹಜ ವಿಚಾರವೆಂದರೆ ಈ ಗುಂಪುಗಳು ಹೊರಗಿನ ಗಾಳಿ ಬೆಳಕುಗಳನ್ನು ವಿರೋಧಿಸಿ ಸ್ವಯಂಬಾಗಿಲು ಮುಚ್ಚಿಕೊಂಡ ಘಟಕಗಳಾದವು. ಅಂದರೆ ಜಾತಿಗಳಾದವು. ಈ ಗುಂಪುಗಳನ್ನು ಬಾಗಿಲು ಮುಚ್ಚಿಕೊಳ್ಳುವಂತೆ ಒತ್ತಾಯಪಡಿಸಲಾಯಿತೋ ಅಥವಾ ಸ್ವಂತ ಇಚ್ಛೆಯಿಂದ ಈ ಕ್ರಿಯೆ ನಡೆಯಿತೋ ಎಂಬ ಪ್ರಶ್ನೆ ಹೇಳುತ್ತದೆ. ಇದಕ್ಕೆ ಉತ್ತರ ಕೆಲವರು ಬಾಗಿಲುಗಳನ್ನು ಮುಚ್ಚಿಕೊಂಡರು. ಇನ್ನು ಕೆಲವರು ತಮ್ಮ ವಿರುದ್ಧವಾಗಿ ಬಾಗಿಲುಗಳನ್ನು ಮುಚ್ಚಿರುವುದನ್ನು ಕಂಡುಕೊಂಡರು. ಒಂದು ಮನಶಾಸ್ತ್ರೀಯವಾದ ವಿವರಣೆ, ಮತ್ತೊಂದು ಯಾಂತ್ರಿಕವಾದದ್ದು. ಜಾತಿಪದ್ಧತಿ ರೂಪಪಡೆದದ್ದನ್ನು ವಿವರಿಸಲು ಇವೆರಡು ಪರಸ್ಪರ ಪೂರಕವಾಗಿವೆ (ಮುಂದುವರೆಯುವುದು)

ನೌಕರರಿಗೆ ಕಿರುಕುಳ

(3ನೇ ಪುಟದಿಂದ)

ಅವರನ್ನು ಕೆಲಸದಿಂದಲೇ ತೆಗೆದು ಹಾಕಿದ್ದಾನೆ. ಈ ನಡುವೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಪಂಡ ಹರಿಜನ ಐ.ಎ.ಎಸ್. ಅಧಿಕಾರಿ ನರೇಂದ್ರ ಸಿಂಗ್ (ಕನ್ನಡಿಗ) ತನ್ನ ಕೆಳಗಿನ ಅಧಿಕಾರಿ ದಲಿತ ವಿರೋಧಿ ಮ್ಯಾನೇಜರ್ ಸುಬ್ಬಯ್ಯನಿಗೆ ತಲೆ ಕೆಣಿಸಿಕೊಂಡು ದಲಿತ ನೌಕರರನ್ನು ರಕ್ಷಿಸುವಲ್ಲಿ ಅಸ್ಪಷ್ಟವಾಗಿ ವಿಫಗೊಂಡಿದ್ದಾರೆ.

ದಲಿತರೆ ವಿಮೋಚನೆಯ ಹೋರಾಟಕ್ಕೆ ಸಜ್ಜಾಗಿ

ಉತ್ತರ ಇಂಡಿಯಾದಲ್ಲಿ ಹುಚ್ಚೆದ್ದ ಪ್ರವಾಹ ಸಹಸ್ರಾರು ದಲಿತರನ್ನು ಬಲಿತೆಗೆದುಕೊಳ್ಳುತ್ತಿದ್ದರೆ ಕರ್ನಾಟಕದಲ್ಲಿ ಮಳೆಯಿಲ್ಲದೆ ಉಂಟಾಗಿರುವ ಕ್ಷಾಮ ದಲಿತರನ್ನು ಹಸಿವಿನಿಂದ ಗಂಟೆ ಗಂಟೆಗೂ ಸಾಯಿಸುತ್ತಿದೆ ಕಣ್ಣೊರೆಸುವ ಕ್ಷಾಮ ಪರಿಹಾರವನ್ನು ಅಧಿಕಾರಿಗಳು ರಾಜಕಾರಣಿಗಳೇ ನುಂಗಿನೀರು ಕುಡಿಯುತ್ತಿದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಅಕ್ಕಿ, ರಾಗಿ, ನುಚ್ಚು, ಸೌದೆ, ಸೀಮೆ ಎಣ್ಣೆ ಇತ್ಯಾದಿ ಬಡವರಿಗೆ ಬೇಕಾದ ವಸ್ತುಗಳ ಬೆಲೆಗಳು ಸಹ ಲಂಗುಲಗಾಮಿಲ್ಲದೆ ಏರುತ್ತಲೇ ಇವೆ.



ನಾವು ಬೆಳೆದ ರಾಗಿ, ಜೋಳ ಕೂಡ ಪೇಟೆಗಳಲ್ಲಿ ಮಾಯವಾಗಿವೆ. ಈ ಕಾಳಸಂತೆ-ಕಪ್ಪುಪೇಟೆಯ ಸರದಾರರಿಂದ ಕಳೆದ ಚುನಾವಣೆಯಲ್ಲಿ ಕೋಟ್ಯಾಂತರ ರೂ. ಕಿತ್ತುಕೊಂಡಿರುವ ಕಾಂಗ್ರೈ ಸರ್ಕಾರ ಅವರ ಕೂದಲನ್ನು ಅಲುಗಾಡಿಸುವ ಶಕ್ತಿಯಿಲ್ಲದೆ ಬಾಯಿಮುಚ್ಚಿ ಕುಳಿತಿದೆ. ಇದರಿಂದಾಗಿ ಹಸಿವಿನಿಂದ ತಡಬಡಿಸುತ್ತಿರುವ ಸಹಸ್ರಾರು ದಲಿತರಿಗೆ ದುಡಿಮೆ ಇಲ್ಲದೆ ಮತ್ತು ದವಸಧಾನ್ಯಗಳು ಸಿಗದೆ ಜೀವಂತ ಸಮಾಧಿಯಾಗುತ್ತಿದ್ದಾರೆ. ನಮ್ಮಲ್ಲಿದ್ದ ಚೆಂಬು, ಬಿಂದಿಗೆ ಮತ್ತು ನಮ್ಮ ತಾಯಂದಿರ, ಅಕ್ಕತಂಗಿಯರ ಓಲೆ, ತಾಳಿಗಳು ಮಾರ್ವಾಡಿಗಳ ಮನೆ ಸೇರುತ್ತಿವೆ. ಇದೆಲ್ಲ ನಾವು ಅನುಭವಿಸುತ್ತಿರುವ ನಿತ್ಯ-ಸತ್ಯ ಕರಾಳ ಸಂಗತಿ.

ಈ ನಡುವೆ ಇಂದಿರಾಗಾಂಧಿಯು ಸ್ಥಾನಬದ್ಧತಾ ಸುಗ್ರೀವಾಜ್ಞೆ ತಂದಿದ್ದಾರೆ. ಈ ಕರಾಳ ಸುಗ್ರೀವಾಜ್ಞೆ ಪ್ರತ್ಯೇಕ ದಲಿತಸ್ಥಾನ ಕೇಳುವ ಅಥವಾ ನಮ್ಮ ವಿಮೋಚನೆಗೆ ತೆರೆಯುವ ಬಾಯಿಗೆ ಬೀಗ ಹಾಕಿದೆ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಬೆಂಗಳೂರಿನ ಪತ್ರಿಕಾಲಯಗಳ ಮೇಲೆ ಕಾಂಗ್ರೈ ಗೂಂಡಾಗಳು ಸತತ ದಾಳಿ ನಡೆಸಿ ಪತ್ರಿಕಾ ಸ್ವಾತಂತ್ರ್ಯವನ್ನೇ ಹತ್ತಿಕ್ಕಲು ಆರಂಭಿಸಿದ್ದಾರೆ. ಜನತೆಯ ಜೀವನಾಡಿಯಾಗಿರುವ ಪತ್ರಿಕೆಗಳ ಸ್ವಾತಂತ್ರ್ಯಹರಣವಾದರೆ ನಮ್ಮ ಕಷ್ಟಕಾರ್ಪಣ್ಯಗಳನ್ನು ವ್ಯಕ್ತಪಡಿಸುವ ವೇದಿಕೆಗಳೇ ಇಲ್ಲವಂತಾಗುವ ದಿನ ದೂರವಿಲ್ಲವೆನ್ನುವ ಸ್ಥಿತಿ ಬಂದಿದೆ. ದೇಶಾದ್ಯಂತ ಈ ಬಗೆಯ ಉಸಿರುಗಟ್ಟುವ ವಾತಾವರಣ, ಭೀತಿ ಸೃಷಿಸಿರುವ ಕಾಂಗ್ರೈ ಪುಢಾರಿಗಳು ಜನತೆಯ ಕಷ್ಟಗಳನ್ನೇ ಮರೆತು ಮತ್ತೊಬ್ಬಳಲ್ಲದ ಗಾಂಧೀಯನ್ನು ಪಟ್ಟಕ್ಕೇರಿಸಿ ದರ್ಬಾರು ನಡೆಸುವ ಕೀಳುಮಟ್ಟದ ರಾಜಕೀಯದಲ್ಲಿ ಮೈಮರೆತಿದ್ದಾರೆ. ಈ ದುಸ್ಥಿತಿಯನ್ನು ತಂದಿಟ್ಟ ಈಗಿನ ವಿರೋಧ ಪಕ್ಷಗಳ ನಾಯಕರು ತಮ್ಮ ವೈಯಕ್ತಿಕತೆ, ಅಧಿಕಾರ ಲಾಲಸೆ, ಹುಂಬುತನಗಳಿಂದ ಛಿದ್ರ ವಿಛಿದ್ರವಾಗಿ ನಿಸತ್ತು ಮೂಲೆಗುಂಪಾಗಿದ್ದಾರೆ. ಈ ಢೋಂಗಿ ರಾಜಕಾರಣಿಗಳೆಲ್ಲ ಒಂದು ರೀತಿಯಲ್ಲಿ ಅಣ್ಣತಮ್ಮಂದಿರೆ.

ಇಷ್ಟಾದರೂ ಅಲ್ಲಲ್ಲಿ ಬೆಲೆಏರಿಕೆ, ಅನೇಕ ಬಗೆಯ ದಬ್ಬಾಳಿಕೆ, ಗೂಂಡಾಗಿರಿ ಮುಂತಾದವುಗಳ ವಿರುದ್ಧ ಜನತಾ ಚಳವಳಿಗಳು ನಡೆಯುತ್ತಲೇ ಇವೆ. ಬೆಲೆಏರಿಕೆ, ಶ್ರೀಮಂತರ ಮತ್ತು ರಾಜಕಾರಣಿಗಳ ದಬ್ಬಾಳಿಕೆಗಳಿಗೆ ಹೆಚ್ಚಾಗಿ ಬಲಿಯಾಗುವವರು ದಲಿತರೇ. ಆದ್ದರಿಂದ ಅಂತಹ ಚಳವಳಿಗಳಲ್ಲಿ ನಾವು ಪಾಲ್ಗೊಳ್ಳಬೇಕು. ಸಾಧ್ಯವಾದರೆ ನಾವೇ ಮುಂದುನಿಂತುಸಂಘಟಿಸಬೇಕು. ನಮ್ಮ ನಮ್ಮ ಸಂಘಟನೆ-ಹೋರಾಟಗಳನ್ನು ಕೇವಲ ಶೇ. 18 ಮೀಸಲಾತಿಗಾಗಿ ಸೀಮಿತಗೊಳಿಸಿಕೊಳ್ಳದೆ ನಮ್ಮ ವಿಮೋಚನೆಗಾಗಿ ಸಮಗ್ರ ಹೋರಾಟದ ಚಳವಳಿಯನ್ನು ಬೆಳೆಸೋಣ. ಈ ಹೊತ್ತಿನಲ್ಲಿ ನಮ್ಮ ಈ ಹೋರಾಟಗಳಿಗೆ ಮುಕ್ತ ವಾತಾವರಣ ಅಗತ್ಯವಾಗಿದ್ದು ಯಾವುದೇ ಕಾಯಿದೆ-ಕಾನೂನುಗಳಿಂದ ನಮ್ಮ ಬಾಯಿ ಮುಚ್ಚಿಸುವ ಯತ್ನಗಳನ್ನು ಜೀವತೆತ್ತಾದರೂ ತಡೆಯಬೇಕು. ಇಲ್ಲದವರಾಗಿರುವ ನಾವು ನಮ್ಮ ಹಕ್ಕುಗಳಿಗಾಗಿ ಬಾಯಿ ತೆರೆಯಬೇಕಾಗಿದೆ. ಅದಕ್ಕಾಗಿ ಶತಶತಮಾನಗಳಿಂದ ಶೋಷಿತರಾದ ನಾವು ಚಳವಳಿ-ಹೋರಾಟಗಳನ್ನು ಮೈಗೂಡಿಸಿಕೊಳ್ಳದೆ ವಿಧಿಯಿಲ್ಲ.

ದಲಿತ ವಿರೋಧಿ ಗಾಂಧೀ ಮತ್ತು ಕಾಂಗ್ರೆಸ್ ರಾಜಕೀಯದಿಂದ ದೂರ ನಿಂತ ನಮ್ಮ ನೆಚ್ಚಿನ ನಾಯಕ ಅಂಬೇಡ್ಕರ್ ಅವರೊಬ್ಬರ ಹೋರಾಟದಿಂದ ನಾವಿಷ್ಟು ಬೆಳಕು ಕಾಣುವುದಾದರೆ ಇಡೀ ದಲಿತರೆಲ್ಲರ ಹೋರಾಟ ಆದರೆ ಹಸಿವು-ಅಸ್ಪೃಶ್ಯತೆ ಎಲ್ಲ ಮಾಯವಾಗಬಹುದು. ಈ ಹೊಸ ಆಸೆಯತ್ತ ಹೆಜ್ಜೆ ಇಡಬೇಕಾದುದು ಹಿಂದೆಂದಿಗಿಂತಲೂ ಇಂದು ಅನಿವಾರ್ಯ. ಏಕೆಂದರೆ ಅಂಬೇಡ್ಕರ್ ಇರಲೇ ಇಲ್ಲವೆಂದು ಭಾವಿಸಿ ಕ್ಷಣ ಹೊತ್ತು ಇಂಡಿಯಾದ ಚರಿತ್ರೆಯತ್ತ ಮುಖ ಮಾಡಿದರೆ ನಮಗೆ ಕಾಣುವುದು ನಮ್ಮ ದಟ್ಟ ಕರಾಳ ಇತಿಹಾಸ. ಅಂಬೇಡ್ಕರ್ ಹುಟ್ಟದೆ, ನಮ್ಮ ಪರ ಹೋರಾಟ ಮಾಡದೇ ಇದ್ದರೆ ನಮ್ಮ ಈಗಿನ ಬದುಕು ಇನ್ನೂ ಕನಿಷ್ಠ ಎಂದರೆ 200 ವರ್ಷಗಳಷ್ಟಾದರೂ ಹಿಂದೆ ಬಿದ್ದಿರುತ್ತಿತ್ತು. ಈ ಎಚ್ಚರವನ್ನು ಅರಿತು ಅಂಬೇಡ್ಕರ್ ನಮಗೆ ಹೇಳಿದ ಜಾಗೃತಿ, ಸಂಘಟನೆ, ಹೋರಾಟ ಪಾಠವನ್ನು ಕಲಿತು ನಮ್ಮನ್ನು ಕಿತ್ತು ತಿನ್ನುತ್ತಿರುವ ಬಡತನ-ಜಾತಿತುಳಿತ, ಕೊಲೆ-ಸುಲಿಗೆ, ದುರಾಡಳಿತದಿಂದ ಕೂಡಿದ ಈ ಭ್ರಷ್ಟ ವ್ಯವಸ್ಥೆಯನ್ನು ಒದ್ದೋಡಿಸಿ ಮಾನವೀಯತೆಯ ಆಧಾರದ ಮೇಲೆ ಸಮತಾ ಸಮಾಜವೊಂದರ ನಿರ್ಮಾಣದತ್ತ ಮುನ್ನಡೆಯೋಣ. ಆಗ ಮಾತ್ರ ಈ ಇಂಡಿಯಾದ ನೆಲ ಇಡಿಇಡಿಯಾಗಿ ನಡಗುತ್ತದೆ. ನಮ್ಮ ವಿಮೋಚನೆಯ ಕಿಂಬೆಳಕು ಕಾಣುತ್ತದೆ.

—ಯಸ

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ: 5ಎ-ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ, ಬೆಂಗಳೂರು-560002.